R.No. 082/2002-03 144/2012-13
100/2022-23

ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿ ಲಿ.

ಪ್ರಧಾನ ಕಛೇರಿ :
ನಂ.137, 1ನೇ ಮಹಡಿ, ಬಂಗಾರಪೇಟೆ ವೃತ್ತ, ಕೋಲಾರ-563101.

"ಸಹಕಾರಿಯ ನಡೆ ಗುಣಮಟ್ಟದೆಡೆ"

ಧ್ಯೇಯಗಳು : ಬದ್ಧತೆ, ವಿಧೇಯತೆ, ಪ್ರಾಮಾಣಿಕತೆ,
ಪಾರದರ್ಶಕತೆ ಮತ್ತು ಭ್ರಷ್ಟಾಚಾರ ಮುಕ್ತ



24ನೇ ಸಾಮಾನ್ಯ ಸಭೆ ಮತ್ತು
2025-26ನೇ ವಾರ್ಷಿಕ ವರದಿ

ಸ್ಥಳ ಮತ್ತು ದಿನಾಂಕ

ಸಮೃದ್ಧಿ ಮ್ಯಾನರ್ ಪಾರ್ಟಿ ಹಾಲ್

ಶನಿವಾರ, 12-09-2026

ವೆಂಕಟೇಶ್ವರನಗರ, MCECHS ಲೇಔಟ್,
ಡಾ॥ ಶಿವರಾಮಕಾರಂತ ನಗರ ಮುಖ್ಯರಸ್ತೆ,
ಬೆಂಗಳೂರು-560077

Scan for Location

Microsoft Teams

Meeting ID: 410 472 574 225 401
Password : ig92BB7a

Pavagada Souharda Soudha

Admin. Office : No. 12, 3rd Cross, M.C.E.C.H.S. Layout, 1st Stage, Dr. Shivaramakaranthanagar,
Hegadenagar, Bengaluru-560077. Mob : 9538886100 / 9538877243 / 9108012460



ಶ್ರೀಯುತ ಡಾ. ವೆಂಕಟೇಶ್ ಐ.ಎ.ಎಸ್. ರವರು
ಕರ್ನಾಟಕರಾಜ್ಯ ಸಹಕಾರ ಸಂಘಗಳ ನಿಬಂಧಕರೊಂದಿಗೆ ಮಾನ್ಯ ಅಧ್ಯಕ್ಷರು

ಸೌಹಾರ್ದ ಸ್ಫೂರ್ತಿ

ಬಿ.ಹೆಚ್. ಕೃಷ್ಣಾರೆಡ್ಡಿ B.E. (Civil) A.M.I.E.

ಸಂಸ್ಥಾಪಕ ಅಧ್ಯಕ್ಷರು

ವಿಕಾಸ ರತ್ನ, ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು

ಅಧ್ಯಕ್ಷರು	: ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿ ಲಿ.
ನಿರ್ದೇಶಕರು	: ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.
ರಾಷ್ಟ್ರೀಯ ಉಪಾಧ್ಯಕ್ಷರು	: ಸಹಕಾರ ಭಾರತಿ
ವ್ಯವಸ್ಥಾಪಕ ನಿರ್ದೇಶಕರು	: ಸೌಹಾರ್ದ ಇನ್‌ಫ್ರಾಟೆಕ್ ಪ್ರೈವೆಟ್ ಲಿ. ಪಾವಗಡ ಚಿಟ್ಸ್ ಪ್ರೈವೆಟ್ ಲಿಮಿಟೆಡ್.
ಕಾರ್ಯದರ್ಶಿ	: ದಿ ಪಾವಗಡ ಚಾರಿಟಬಲ್ ಟ್ರಸ್ಟ್



ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ B.E. (Civil) A.M.I.E.

ಆಡಳಿತ ಮಂಡಳಿಯ ನಿರ್ದೇಶಕರು



ಆರ್. ಎನ್. ಮೋಹನ್ ಮುರಳೀಧರ್
ಎಂ.ಎ.ಆರ್.ಬಿ.ವಿ.
ಉಪಾಧ್ಯಕ್ಷರು



ಹೆಚ್. ಖಾಸಿಮ್ ಸಾಬ್
B.A.
ನಿರ್ದೇಶಕರು



ಜಿ.ಪಿ. ಪಾಲಯ್ಯ
B.A.
ನಿರ್ದೇಶಕರು



ಜಿ.ಎನ್. ಪ್ರಕಾಶ್ ರೆಡ್ಡಿ
Diploma E&E
ನಿರ್ದೇಶಕರು



ಜಿ.ಎನ್. ರಾಜು
B.Sc
ನಿರ್ದೇಶಕರು



ಗುಂಡಪ್ಪ ಕೆ.
B.Sc
ನಿರ್ದೇಶಕರು



ಜಗದೀಶ್ ಚಂದ್ರ ಎಸ್.
B.E. Civil
ನಿರ್ದೇಶಕರು



ಬಿ.ಎನ್. ರಮೇಶ್
B.Sc
ನಿರ್ದೇಶಕರು



ಆರ್. ವೇಣುಗೋಪಾಲಚಾರ್
B.A.
ನಿರ್ದೇಶಕರು



ಜಿ. ಧನಂಜಯ
Diploma E&C
ನಿರ್ದೇಶಕರು



ಪಿ. ಸೌಭಾಗ್ಯಮ್ಮ ಪುಟ್ಟಗಂಗಯ್ಯ
B.A.
ನಿರ್ದೇಶಕರು



ರೇಖಾ ಕೆ. ಶಾಮನೂರ್ ಪ್ರಕಾಶ್
B.Com, M.C.A
ನಿರ್ದೇಶಕರು



ಜಿ.ಹೆಚ್. ರಾಮಲಿಂಗಾರೆಡ್ಡಿ
B.A.
ಕಾರ್ಯನಿರ್ವಹಣ ನಿರ್ದೇಶಕರು



ಹೆಚ್. ದಯಾಕರ್ ರೆಡ್ಡಿ
M.Sc (AGRI)
ಕಾರ್ಯನಿರ್ವಹಣ ನಿರ್ದೇಶಕರು



ರೆಡ್ಡಪ್ಪ ರೆಡ್ಡಿ
M.Sc (AGRI)
ಕಾರ್ಯನಿರ್ವಹಣ ನಿರ್ದೇಶಕರು



ವೈ. ಎನ್. ವೇಣು
B.Com
ಮುಖ್ಯ ಕಾರ್ಯನಿರ್ವಹಣಾಧಿಕಾರಿ



ವೆಂಕಟರಾಮಪ್ಪ
C.A.
ಲೆಕ್ಕ ಪರಿಶೋಧಕರು



ಕೇಂದ್ರದ ಸಹಕಾರ ಮಂತ್ರಿಗಳಾದ ಶ್ರೀಯುತ ಅಮಿತ್‌ಶಾ ರವರಿಗೆ
ಮಾನ್ಯ ಅಧ್ಯಕ್ಷರಿಂದ ಅಭಿನಂದನೆ ಸಲ್ಲಿಕೆ



ಸಂಘದ ಹಿರಿಯರಾದ ಶ್ರೀಯುತ ಸಂತೋಷ್‌ಜಿ ರವರೊಂದಿಗೆ
ಮಾನ್ಯ ಅಧ್ಯಕ್ಷರು



ಸಾಮಾನ್ಯ ಸಭೆಗೆ ಆಗಮಿಸಿದ ಸಹಕಾರ ಸಚಿವರಾದ
ಲಕ್ಷ್ಮಣ ಸವಧಿ ಅವರೊಂದಿಗೆ ಗಣ್ಯರು



ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಾಜಿ ಸಚಿವರಾದಂತ
ಶ್ರೀಯುತ ಹೆಚ್.ಕೆ. ಪಾಟೀಲ್‌ರವರೊಂದಿಗೆ ಮಾನ್ಯ ಅಧ್ಯಕ್ಷರು



ಯಲಹಂಕ ವಿಧಾನಸಭಾ ಕ್ಷೇತ್ರ ಶಾಸಕರಾದ
ಶ್ರೀಯುತ ಎಸ್.ಆರ್. ವಿಶ್ವನಾಥ ರವರೊಂದಿಗೆ ಮಾನ್ಯ ಅಧ್ಯಕ್ಷರು



ಕೇಂದ್ರ ಹಣಕಾಸು ಮಂತ್ರಿಗಳಾದ ಶ್ರೀಮತಿ ನಿರ್ಮಲಾ ಸೀತಾರಾಮನ್
ಅವರೊಂದಿಗೆ ಮಾನ್ಯ ಅಧ್ಯಕ್ಷರು



ಶ್ರೀಯುತ ನಿವೃತ್ತ ನ್ಯಾಯಮೂರ್ತಿ ಹಾಗೂ ಮಾಜಿ ಲೋಕಾಯುಕ್ತರಾದಂತಹ
ಸಂತೋಷ್ ಹೆಗ್ಡೆರವರಿಗೆ ಆಡಳಿತ ಮಂಡಳಿವತಿಯಿಂದ ಸನ್ಮಾನ



ಕೇಂದ್ರದ ಸಚಿವರಾದ ಅನಂತ್‌ಕುಮಾರ್ ರವರೊಂದಿಗೆ
ನಮ್ಮ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರು



ಮಾಜಿ ಮುಖ್ಯಮಂತ್ರಿರಾದ ಶ್ರೀಯುತ ಡಿ ವಿ ಸದಾನಂದ ಗೌಡ
ಅವರೊಂದಿಗೆ ಮಾನ್ಯ ಅಧ್ಯಕ್ಷರು



ಏಷ್ಯಾನೆಟ್ ಸುವರ್ಣ ನ್ಯೂಸ್ ಸಂಪಾದಕರಾದ ಶ್ರೀಯುತ
ಅಜಿತ್ ಹನುಮಕ್ಕನವರ್‌ರವರಿಗೆ ಆಡಳಿತ ಮಂಡಳಿ ವತಿಯಿಂದ ಸನ್ಮಾನ



ಶ್ರೀಯುತ ಪಾವಗಡ ಪ್ರಕಾಶ್ ರಾವ್ ರವರಿಗೆ
ಆಡಳಿತ ಮಂಡಳಿವತಿಯಿಂದ ಸನ್ಮಾನ



ಶ್ರೀಯುತ ಡಾ. ಸಿ.ಎನ್. ಮಂಜುನಾಥ್ ರವರು ಲೋಕಸಭಾ ಸದಸ್ಯರು,
ಬೆಂಗಳೂರು ಗ್ರಾ. ಜಿಲ್ಲೆ. ಹಾಗೂ ಮಾಜಿ ನಿರ್ದೇಶಕರು, ಜಯದೇವ ಹೃದಯ ರಕ್ತನಾಳದ
ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ರವರಿಗೆ ಆಡಳಿತ ಮಂಡಳಿ ವತಿಯಿಂದ ಸನ್ಮಾನ.



ಹೇಮಾವತಿ ಶ್ರೀ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಭಕ್ತಾಧಿಗಳಿಗೆ ಉಚಿತ ಅನ್ನ ಸಂತರ್ಪಣೆ ಹಾಗೂ ಮಜ್ಜಿಗೆ ವಿತರಣೆ.



ಪಾವಗಡ ಚಾರಿಟಬಲ್ ಟ್ರಸ್ಟ್ ವತಿಯಿಂದ ಸರ್ಕಾರಿ ಶಾಲೆಯಲ್ಲಿ ಊಟದ ತಟ್ಟೆ ಮತ್ತು ಲೋಟ ವಿತರಿಸಿದ ಕಾರ್ಯಕ್ರಮ.



ದಿ ಪಾವಗಡ ಚಾರಿಟಬಲ್ ಟ್ರಸ್ಟ್ ವತಿಯಿಂದ ಗ್ರಾಮೀಣ ಪ್ರಾಂತ್ಯಗಳಾದ ಲಿಂಗದಹಳ್ಳಿ ಮತ್ತು ವೈ.ಎನ್.ಹೊಸಕೋಟೆಯಲ್ಲಿ ಪ್ರತಿ ದಿನ 10 ರೂ. ಊಟದ ವ್ಯವಸ್ಥೆಯ ಉದ್ಘಾಟನೆ.



ದಿ ಪಾವಗಡ ಚಾರಿಟಬಲ್ ಟ್ರಸ್ಟ್ ವತಿಯಿಂದ ಪಾವಗಡದ ಎಸ್.ಎಸ್.ಕೆ. ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಾರ್ಷಿಕ ಶುಲ್ಕವನ್ನು ಪಾವತಿಸಿದ ಕ್ಷಣ.



ದಿ ಪಾವಗಡ ಚಾರಿಟಬಲ್ ಟ್ರಸ್ಟ್ ವತಿಯಿಂದ ಪಾವಗಡ ತಾಲ್ಲೂಕಿನ ಕೋಟಗುಡ್ಡ ಗ್ರಾಮದ ಆಂಜನೇಯ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ರಮಕ್ಕೆ ಭಾಗವಹಿಸಿದ ಗಣ್ಯರು.



ರಜತ ಮಹೋತ್ಸವ ಸಲುವಾಗಿ ಆಯೋಜಿಸಿದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಗೆದ್ದ ತುಮಕೂರು ರೂರಲ್ ತಂಡ ಸಂಭ್ರಮಿಸಿದ ಕ್ಷಣ.

ವಕೀಲರು ಮತ್ತು ಕಾನೂನು ಸಲಹೆಗಾರರು


ಜನಾರ್ಧನ ರೆಡ್ಡಿ
ಸಂಚಾಲಕರು, ಬೆಂಗಳೂರು


ಪಿ.ಸಿ. ಕೃಷ್ಣಾರೆಡ್ಡಿ
ಮಧುಗಿರಿ


ಶಾಮನೂರು ಪ್ರಕಾಶ್
ದಾವಣಗೆರೆ


ಜಯಪ್ರಕಾಶ್ ರೆಡ್ಡಿ
ಬೆಂಗಳೂರು


ಮಧುಕರ್ ಜಿ. ಹೆಗ್ಗಡೆ
ಬೆಂಗಳೂರು


ಕೆ.ವಿ.ಬಾಲಸುಬ್ರಮಣ್ಯಂ
ಬೆಂಗಳೂರು


ಆರ್.ಮಹೇಶ್ ಉಪ್ಪಿನ್
ಬೆಂಗಳೂರು


ಪಿ. ಶ್ರೀನಿವಾಸುಲು
ಬೆಂಗಳೂರು


ಪಿ. ಕೃಷ್ಣಕಾಂತ್
ಬೆಂಗಳೂರು


ಶಿವಶಂಕರ್ ಎ.
ಬೆಂಗಳೂರು


ಪ್ರಭಾಕರ್ ರೆಡ್ಡಿ
ಬೆಂಗಳೂರು


ಬಿ.ಆರ್.ಅಶ್ವತ್ಥನಾರಾಯಣ ರೆಡ್ಡಿ
ಮಧುಗಿರಿ


ಹೆಚ್.ವಿ. ರಂಗನಾಥ್ ರೆಡ್ಡಿ
ತುಮಕೂರು


ಭಗವಂತಪ್ಪ
ಪಾವಗಡ


ಬಿ.ಎ ರಾಜೀವ್
ಚಿತ್ರದುರ್ಗ


ಎಂ.ಪಿ. ನಾರಾಯಣಸ್ವಾಮಿ
ಬೆಂಗಳೂರು


ಸುಧೀರ್
ಬೆಂಗಳೂರು


ವೆಂಕಟರಾಮ ರೆಡ್ಡಿ
ಪಾವಗಡ


ಎನ್. ವೆಂಕಟರಾಮ
ಶಿವಮೊಗ್ಗ


ಪಿ.ವಿ. ವಿನಯ್
ಮಂಡ್ಯ


ಸಿ.ಎಮ್. ನಿರಂಜನ್ ಸ್ವಾಮಿ
ಕೋಲಾರ


ಸತ್ಯನಾರಾಯಣಮೂರ್ತಿ
ಬೆಂಗಳೂರು


ಶ್ರೀನಾಥ್ ಗೌಡ
ಬೆಂಗಳೂರು


ವೀರೇಶ್ ಪಿ.ಆರ್.
ಚಿತ್ರದುರ್ಗ


ಮಹೇಶ್ ಎನ್.
ಬೆಂಗಳೂರು


ಶಶಿಧರ್ ಜಿ.ಎಸ್.
ತಿರಾ


ಎಂ. ನಾಗೇಂದ್ರ ರೆಡ್ಡಿ
ಪಾವಗಡ


ನಾಗಿರೆಡ್ಡಿ ಕೆ. ಎಸ್.
ಬೆಂಗಳೂರು


ಎ.ಡಿ. ಅಂಜನ್ ಕುಮಾರ್
ಬೆಂಗಳೂರು


ಕೆ.ಪಿ. ಮಂಜು ಪ್ರಕಾಶ್
ತುಮಕೂರು


ಹನುಮಂತ ರಾಜು
ರಾಮನಗರ


ಕೆ.ವಿ. ವೆಂಕಟರೆಡ್ಡಿ
ಬೆಂಗಳೂರು


ಜಿ.ಎಸ್. ಯೋಗೇಶ್
ತುಮಕೂರು


ಮಂಜುನಾಥ
ಬೆಂಗಳೂರು


ಆರ್.ರಾಘವೇಂದ್ರ ಬಾಬು
ತಿರಾ


ರಘು ಎಸ್.ವಿ
ಪಾವಗಡ


ಕುಮಾರ
ದೊಡ್ಡಬಳ್ಳಾಪುರ


ರಾಜು .ಎಸ್
ಬೆಂಗಳೂರು


ಹರಿಕೃಷ್ಣ ಎಸ್.
ಬೆಂಗಳೂರು


ಎಸ್. ಬಿ. ದೀಪಾ
ಮಂಡ್ಯ

ಆಯೇಷಾ ಬಾನು
ಪಾವಗಡ

ಕೆ. ಮನೋಜ್ಞ
ಬೆಂಗಳೂರು

ಬಿ. ಕೇಶವರೆಡ್ಡಿ
ತುಮಕೂರು

ಓಬಯ್ಯ ಟಿ.
ತುಮಕೂರು

ವಿಜಯ್ ಭರತ್ ಹರಳಿಕಟ್ಟಿ
ಹಾವೇರಿ

ಬ್ರಿಜೇಶ್ ಆರ್.
ಬೆಂಗಳೂರು

ಸುಮಾ ಇ.
ಶಿವಮೊಗ್ಗ

ರಘುಕುಮಾರ್ ಹೆಚ್.
ತುಮಕೂರು

ಆರ್. ಗಿರೀಶ್
ದಾವಣಗೆರೆ

ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್‌ಕೋ–ಆಪರೇಟಿವ್ ಸೊಸೈಟಿ ಲಿ.

2025–26ನೇ ವಾರ್ಷಿಕ ಸಾಮಾನ್ಯ ಸಭೆ

ಸ್ಥಳ ಮತ್ತು ದಿನಾಂಕ

ಸಮೃದ್ಧಿ ಮ್ಯಾನರ್ ಪಾರ್ಟಿ ಹಾಲ್

ಶನಿವಾರ, 12–09–2026

ವೆಂಕಟೇಶ್ವರನಗರ, MCECHS ಲೇಔಟ್, ಡಾ॥ ಶಿವರಾಮಕಾರಂತ ನಗರ ಮುಖ್ಯರಸ್ತೆ
ಬೆಂಗಳೂರು–560077 ಮೋ: 9538877243/9538886100

ಸಾಂಸ್ಕೃತಿಕ ಕಾರ್ಯಕ್ರಮಗಳು

ಉಪಹಾರ :

ಸಮಯ : ಬೆಳಿಗ್ಗೆ 8.00 ರಿಂದ 09.30

ಸಾಮಾನ್ಯ ಸಭೆ

ಸಮಯ : ಬೆಳಿಗ್ಗೆ 9.30 ರಿಂದ 11.00

ವಿಶೇಷ ಸಭೆ

ಸಮಯ: ಬೆಳಿಗ್ಗೆ 11.15 ರಿಂದ 12.30 ಗಂಟೆಯವರೆಗೆ

ಉದ್ಘಾಟನೆ :

ಶ್ರೀಯುತ ಡಾ. ಎಂ.ವಿ. ವೆಂಕಟೇಶ್‌ರವರು, ಐ.ಎ.ಎಸ್
ಕರ್ನಾಟಕರಾಜ್ಯ ಸಹಕಾರ ಸಂಘಗಳ ನಿಬಂಧಕರು

ಅತಿಥಿಗಳು :

ಶ್ರೀಯುತ ಡಾ. ಸುರೇಶ್‌ಗೌಡರವರು, ಕೆ.ಸಿ.ಎಸ್.
ಕರ್ನಾಟಕರಾಜ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು

ಶ್ರೀಯುತ ಶರಣಗೌಡ ಜಿ. ಪಾಟೀಲ್‌ರವರು
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.

ಅಧ್ಯಕ್ಷತೆ :

ಶ್ರೀಯುತ ಬಿ. ಹೆಚ್. ಕೃಷ್ಣಾರೆಡ್ಡಿ B.E. (Civil) A.M.I.E.
ಸಂಸ್ಥಾಪಕ ಅಧ್ಯಕ್ಷರು : ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಸೊಸೈಟಿ ಲಿ.
ನಿರ್ದೇಶಕರು: ಕರ್ನಾಟಕರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

ಕಾರ್ಯಕ್ರಮಗಳು

* ನಾಲ್ಕು ನೂತನ ಶಾಖೆಗಳ ಉದ್ಘಾಟನೆ.
  (ಬಳ್ಳಾರಿ, ಹಾಸನ, ಹೊಸಪೇಟೆ, ಹುಬ್ಬಳ್ಳಿ)
* ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ.
* ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು.
* ಸಮಾಜದ ಗಣ್ಯ ವ್ಯಕ್ತಿಗಳಿಗೆ ಸನ್ಮಾನ.
* ಉತ್ತಮ ಶಾಖೆ ಮತ್ತು ಶಾಖಾಸಮಿತಿ.
* ದಿ ಪಾವಗಡ ಚಾರಿಟಬಲ್ ಟ್ರಸ್ಟ್‌ನ ಕಾರ್ಯಕ್ರಮಗಳು

ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್‌ಕೋ-ಆಪರೇಟಿವ್ ಸೊಸೈಟಿ ಲಿ.

ಸನ್ಮಾನಿತರು :

ಶ್ರೀಯುತ ಸಣ್ಣ ಚಿತ್ತಯ್ಯ
ಕೆ.ಇ.ಎಸ್. ಇಂಜಿನಿಯರಿಂಗ್ ಚೀಫ್ (ರಿ) ಪಬ್ಲಿಕ್ ವರ್ಕ್ಸ್ ಡಿಪಾರ್ಟ್ ಮೆಂಟ್, ಬೆಂಗಳೂರು.

ಶ್ರೀಯುತ ಮಂಜುನಾಥ್
ನಿವೃತ್ತ ಡಿ.ಆರ್.ಪಿ.ಎಸ್. ಬೆಂಗಳೂರು.

ಶ್ರೀಯುತ ವಿ. ನಾಗರಾಜಪ್ಪ
ಧರ್ಮದರ್ಶಿಗಳು, ವೆಂಕಟೇಶಪುರ, ಜಕ್ಕೂರು, ಬೆಂಗಳೂರು.

ಶ್ರೀಯುತ ಗೋವಿಂದರೆಡ್ಡಿ
ನಿವೃತ್ತ ಇಂಜಿನಿಯರ್, ತುಮಕೂರು.

ಶ್ರೀಯುತ ಕೃಷ್ಣಾರೆಡ್ಡಿ
ನಿವೃತ್ತ ಪಿ.ಟಿ. ಟೀಚರ್, ಕೆ.ಟಿ.ಹಳ್ಳಿ.

ಶ್ರೀಯುತ ಎಂ. ತಿಪ್ಪೇಸ್ವಾಮಿ
ಕನ್ನಡಭಾಷಾ ಅಧ್ಯಾಪಕರು, ಅರಸಿಕೆರೆ, ಪಾವಗಡ ತಾಲ್ಲೂಕು.



ಉಪನ್ಯಾಸ

ಸಮಯ : ಮಧ್ಯಾಹ್ನ 12.45 ರಿಂದ 2.00 ಗಂಟೆಯವರೆಗೆ

ಸಂಪನ್ಮೂಲ ವ್ಯಕ್ತಿ :

ಶ್ರೀಯುತ ಚಕ್ರವರ್ತಿ ಸೂಲಿಬೆಲೆ ರವರು

ವಿಷಯ : ರಾಷ್ಟ್ರೀಯತೆ ಮತ್ತು ಸಹಕಾರ

ಸಹಕಾರಿಯ ವಾರ್ಷಿಕ ಅವಲೋಕನ ಸಭೆ

ಮಧ್ಯಾಹ್ನ 3.30 ರಿಂದ 5.50 ಗಂಟೆಯವರೆಗೆ

ಸ್ವಾಗತ ಬಯಸುವವರು :

ಆಡಳಿತ ಮಂಡಳಿ, ಶಾಖಾ ಸಮಿತಿಗಳು,
ಸದಸ್ಯರು ಹಾಗೂ ಸಿಬ್ಬಂದಿ

ಶ್ರೀ ವೈ.ಎನ್. ವೇಣು
ಮುಖ್ಯ ಕಾರ್ಯನಿರ್ವಹಣಾಧಿಕಾರಿ

24ನೇ ವಾರ್ಷಿಕ ಸಾಮಾನ್ಯ ಸಭೆ
12 ಸೆಪ್ಟೆಂಬರ್ 2026

ಮಾನ್ಯ ಸಹಕಾರಿ ಬಂಧುಗಳೇ,

ಸಹಕಾರಿಯ 2025–26ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ : 12–09–2026ರ ಶನಿವಾರ ಬೆಳಿಗ್ಗೆ 9.30 ಗಂಟೆಗೆ ಸರಿಯಾಗಿ, ಸಮೃದ್ಧಿ ಮ್ಯಾನರ್ ಪಾರ್ಟಿ ಹಾಲ್, ವೆಂಕಟೇಶ್ವರನಗರ **MCECHS** ಬಡಾವಣೆ, ಡಾ॥ ಶಿವರಾಮಕಾರಂತನಗರ ಮುಖ್ಯರಸ್ತೆ, ಬೆಂಗಳೂರು – 560077. ರಲ್ಲಿ ಹಮ್ಮಿಕೊಂಡಿದ್ದು ಈ ಸಭೆಗೆ ತಾವುಗಳು ಆಗಮಿಸಬೇಕಾಗಿ ಕೋರಲಾಗಿದೆ.

ಸಭೆಯಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಗುವುದು.

ಕಾರ್ಯಸೂಚಿ

ಚರ್ಚಿಸುವ ವಿಷಯಗಳು :

1. **ಪ್ರಾರ್ಥನೆ**
2. **ಸ್ವಾಗತ**
3. **ಉದ್ಘಾಟನೆ, ಪ್ರಾಸ್ತಾವಿಕ ನುಡಿ ಅಧ್ಯಕ್ಷರಿಂದ**
4. **ಅಗಲಿದ ಸದಸ್ಯರಿಗೆ ಶ್ರದ್ಧಾಂಜಲಿ**
5. **24ನೇ ಸಾಲಿನ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ದಾಖಲಿಸುವುದು.**
6. **23ನೇ ಸಾಲಿನ ಸಾಮಾನ್ಯ ಸಭೆಯ ನಡುವಳಿಕೆಗಳ ಬಗ್ಗೆ ಚರ್ಚೆ.**
7. **2025–26ನೇ ಸಹಕಾರ ವರ್ಷದಲ್ಲಿ ಸದಸ್ಯರ ಸೇರ್ಪಡೆ ಮತ್ತು ಹಿಂಪಡೆದ ವರದಿ.**
8. **2025–26ನೇ ಸಾಲಿನ ವಾರ್ಷಿಕ ವರದಿ ಹಾಗೂ 2026–27ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಗಳ ಬಗ್ಗೆ ಚರ್ಚೆ.**
9. **2025–26ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಅನುಪಾಲನ ವರದಿಗಳ ಬಗ್ಗೆ ಚರ್ಚೆ.**
10. **2025–26ನೇ ಸಾಲಿನ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳು ಹಾಗೂ 2026–27 ಮತ್ತು 2027–28ನೇ ಮುಂಗಡ ಪತ್ರದ ಅನುಮೋದನೆ.**
11. **2025–26ರ ನಿವ್ವಳ ಲಾಭ ವಿಲೇವಾರಿ**
12. **2026–27ನೇ ಸಾಲಿನ ಲೆಕ್ಕ ಪರಿಶೋಧಕರ ನೇಮಕ ಮತ್ತು ಸಂಭಾವನೆ ಕುರಿತು.**
13. **2025–26ನೇ ಸಾಲಿನ ಆಡಳಿತ ಮಂಡಳಿಯ ನಡುವಳಿಕೆಗಳ ಬಗ್ಗೆ ಚರ್ಚೆ.**
14. **ಬೈಲಾ ತಿದ್ದುಪಡಿಯ ಕುರಿತು ಚರ್ಚೆ.**
15. **ಸಿಬ್ಬಂದಿ ವೃಂದಬಲ, ನೇಮಕಾತಿ ಸೇವೆ ಖಾಯಂ, ವೇತನ ಶ್ರೇಣಿ, ಬೋನಸ್ ಮತ್ತು ರಾಜೀನಾಮೆ ಬಗ್ಗೆ.**
16. **ಆಡಳಿತ ಮಂಡಳಿ ಸದಸ್ಯರು, ಶಾಖಾ ಸಮಿತಿ ಸದಸ್ಯರು ಹಾಗೂ ಇತರೆ ಉಪಸಮಿತಿ ಸದಸ್ಯರ ಸಭಾಭತ್ಯಾ, ಗೌರವ ಭತ್ಯೆಯನ್ನು ಪರಿಷ್ಕರಿಸುವ ಕುರಿತು.**
17. **ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳ ಅಧ್ಯಯನ ಪ್ರವಾಸ ಕುರಿತು.**
18. **ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರವಲೋಕನ.**
19. **ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕರ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವಲ್ಲಿ ಆ ನೌಕರರ ಪಟ್ಟಿಯ ಪರಿಗಣನೆ.**
20. **ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಉತ್ತಮ ಶಾಖೆ, ಉತ್ತಮ ಶಾಖಾ ಸಮಿತಿ ಪ್ರಶಸ್ತಿ,**
21. **ಸಹಕಾರಿಗೆ ಸ್ವಂತ ನಿವೇಶನ ಹಾಗೂ ಕಟ್ಟಡಗಳ ನಿರ್ಮಾಣ ಮತ್ತು ಹೂಡಿಕೆಯ ವಿನಿಯೋಗದ ಬಗ್ಗೆ.**

22. ನೂತನ ಶಾಖೆಗಳ ಪ್ರಾರಂಭಿಸುವ ಬಗ್ಗೆ ಚರ್ಚೆ

23. ಶಾಖೆಗಳನ್ನು ಸ್ಥಳಾಂತರಿಸುವ ಕುರಿತು.

24. ಅನುತ್ಪಾದಕ ಸಾಲಗಳಿಗೆ ಪ್ರವಾದಾನ ಮಾಡುವ ಬಗ್ಗೆ.

25. ಮಂಡಳಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ

26. ನಿರ್ದೇಶಕರು ಮತ್ತು ಅದರ ಸಂಬಂಧಿಕರಿಗೆ ನೀಡಿದ ಸಾಲಗಳ ಹಾಗೂ ಸುಸ್ತಿಯ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮಗಳ ಕುರಿತು.

27. ಕಾಲಕಾಲಕ್ಕೆ ಠೇವಣಿ ಮತ್ತು ಸಾಲಗಳ ಬಡ್ಡಿ ಪರಿಷ್ಕರಣೆಗಳ ಅನುಮೋದನೆ.

28. 2026–27ನೇ ಸಾಲಿನ ಆಂತರಿಕ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗಧಿಪಡಿಸುವುದು.

29. ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ವಾಟ್ಸ್ ಆಪ್ ಮೂಲಕ ಕಳುಹಿಸಲು ಅನುಮತಿಸುವ ಕುರಿತು.

30. ರಜತ ಮಹೋತ್ಸವ ಆಚರಣೆಯ ಬಗ್ಗೆ.

31. ಸದಸ್ಯರ ಪ್ರಶ್ನೆಗಳು ಮತ್ತು ಸಲಹೆಗಳು

32. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

33. ವಂದನಾರ್ಪಣೆ

ಶ್ರೀ ವೈ. ಎನ್. ವೇಣು
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸೂಚನೆ :

* ಸದಸ್ಯರು ತಪ್ಪದೆ ಈ ಅಹ್ವಾನ ಪತ್ರ ಮತ್ತು ವಿದ್ಯುನ್ಮಾನ ಪ್ರತಿಯನ್ನು ತರುವುದು.
* ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು ಮತ್ತು ಸಲಹೆಗಳು ಇದ್ದಲ್ಲಿ ಸಭೆ ನಡೆಯುವ 7 ದಿನಗಳ ಮುಂಚಿತವಾಗಿ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಗೆ ಬರೆದು ಕಳುಹಿಸುವುದು.
* ಸಹಕಾರಿಯ ಪೂರ್ಣ ಮಾಹಿತಿಗಾಗಿ ವೆಬ್‌ಸೈಟ್ www.pavagadasouharda.com ನಲ್ಲಿ ಲಭ್ಯವಿರುತ್ತದೆ.

ತಮಗೆ ಆದರದ ಸುಸ್ವಾಗತ.

24ನೇ ವಾರ್ಷಿಕ ಸಾಮಾನ್ಯ ಸಭೆ
12 ಸೆಪ್ಟೆಂಬರ್ 2026

ಸಭೆಯ ಟಿಪ್ಪಣಿಗಳು

ವಿಷಯ 04: ಅಗಲಿದ ಸದಸ್ಯರಿಗೆ ಶ್ರದ್ಧಾಂಜಲಿ
ಟಿಪ್ಪಣಿ : 2025–26ರ ಸಾಲಿನಲ್ಲಿ ದೈವಾದೀನರಾದ ಸದಸ್ಯರುಗಳ ವಿವರವನ್ನು ಪುಟ ಸಂಖ್ಯೆ 54ರಲ್ಲಿ ನೀಡಲಾಗಿದ್ದು ಸಭೆಯಲ್ಲಿ ಉಪಸ್ಥಿತರಿರುವ ಎಲ್ಲಾ ಸದಸ್ಯರು ತಾವು ಕುಳುತಿರುವಲ್ಲಿಯೇ 01 ನಿಮಿಷಗಳ ಕಾಲ ಎದ್ದು ನಿಂತು ಮೌನಾಚರಣೆ ಮಾಡುವ ಮೂಲಕ ಅವರ ಆತ್ಮಕ್ಕೆ ಚಿರಶಾಂತಿ ಕೊಡಲೆಂದು ದೇವರಲ್ಲಿ ಪ್ರಾರ್ಥಿಸಬೇಕಾಗಿ ಮನವಿ

ವಿಷಯ 05: 24ನೇ ಸಾಲಿನ ಸಾಮಾನ್ಯ ಸಭೆಯ ಆಹ್ವಾನ ಪತ್ತಿಕೆಯನ್ನು ಓದಿ ದಾಖಲಿಸುವುದು.

ಟಿಪ್ಪಣಿ : ದಿನಾಂಕ **21ನೇ ಆಗಸ್ಟ್ 2026** ರಂದು ಕಳುಹಿಸಿದ 24ನೇ ಸಾಮಾನ್ಯ ಸಭೆಯ ನೋಟೀಸನ್ನು ದಾಖಲಿಸಲು ಸಭೆಯು ಸರ್ವಾನುಮತದಿಂದ ಅಂಗೀಕರಿಸಬಹುದಾಗಿದೆ.

ವಿಷಯ 06: 23 ನೇ ಸಾಲಿನ ಸಾಮಾನ್ಯ ಸಭೆಯ ನಡುವಳಿಕೆಗಳ ಅನುಮೋದನೆ.

ಟಿಪ್ಪಣಿ: 23ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಎಲ್ಲಾ ಶಾಖೆಗಳ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸಲಾಗಿದ್ದು. ಅದಕ್ಕೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ದಿನಾಂಕ:06–09–2026ರೋಳಗೆ ಸಹಕಾರಿಗೆ ತಲುಪುವಂತೆ ಲಿಖಿತವಾಗಿ ಕಳುಹಿಸಲು ಈ ಮೂಲಕ ಸೂಚಿಸಲಾಗಿತ್ತು ನಡವಳಿಕೆಗಳ ಕುರಿತಂತೆ ಯಾವುದೇ ಆಕ್ಷೇಪಣೆಗಳನ್ನು ಸಹಕಾರಿಗೆ ಸಲ್ಲಿಸಿರುವುದಿಲ್ಲ. ಆದ್ದರಿಂದ ಸದರಿ ನಡವಳಿಗಳನ್ನು ಸಭೆಯು ಅಂಗೀಕರಿಸಬಹುದಾಗಿದೆ.

ವಿಷಯ 7: 2025–26ನೇ ಸಹಕಾರ ವರ್ಷದಲ್ಲಿ ಸದಸ್ಯರ ಸೇರ್ಪಡೆ ಮತ್ತು ವಾಪಸ್ಸು ಪಡೆದ ವರದಿ

ಟಿಪ್ಪಣಿ : 2025–26ನೇ ಸಾಲಿನಲ್ಲಿ 1087 ಸದಸ್ಯರಿಗೆ ಸದಸ್ಯತ್ವ ನೀಡಿದ್ದು ಹಾಗೂ 958 ಸದಸ್ಯರು ಸದಸ್ಯತ್ವದಿಂದ ಅವರ ಮನವಿಯನುಸಾರ ವಾಪಸ್ಸು ಪಡೆಯಲಾಗಿದ್ದು ಈ ವಿಷಯವನ್ನು ಅನುಮೋದಿಸಬಹುದಾಗಿದೆ.

ವಿಷಯ 8 : 2025–26ನೇ ಸಾಲಿನ ವಾರ್ಷಿಕ ವರದಿ ಹಾಗೂ 2026–27ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಅನುಮೋದನೆ.
ಟಿಪ್ಪಣಿ: ಈ ನೋಟೀಸಿನೊಂದಿಗೆ ನೀಡಲಾದ 2025–26ನೇ ಸಾಲಿನ ವಾರ್ಷಿಕ ವರದಿ (ಪುಟ ಸಂಖ್ಯೆ 18 ರಿಂದ 23) ಯನ್ನು ಹಾಗೂ 2025–26 ನೇ ಸಾಲಿನ ಕ್ರಿಯಾ ಯೋಜನೆಯನ್ನು ನೀಡಲಾಗಿದೆ (ಪುಟ ಸಂಖ್ಯೆ 24) ಇದನ್ನು ಪರಿಶೀಲಿಸಿ ಸಭೆಯು ಅಂಗೀಕರಿಸಬಹುದಾಗಿದೆ.

ವಿಷಯ 9 : 2025–26ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಅನುಪಾಲನ ವರದಿ ಅನುಮೋದನೆ
ಟಿಪ್ಪಣಿ : ಈ ನೋಟಿಸಿನೊಂದಿಗೆ ಸನ್ನದು ಲೆಕ್ಕ ಪರಿಶೋದಕರಾದ ಪಿ.ಎನ್.ಆರ್ & ಕಂ. ಇವರು ನೀಡಿದ ಲೆಕ್ಕ ಪರಿಶೋಧನಾ ಲೆಕ್ಕಪತ್ರ ವಿವರವನ್ನು ಪುಟ ಸಂಖ್ಯೆ 25 ರಿಂದ 44 ರಲ್ಲಿ ನೀಡಲಾಗಿದೆ ಹಾಗೂ ಅನುಪಾಲನಾ ವರದಿಯನ್ನು ಪುಟ ಸಂಖ್ಯೆ 45 ರಲ್ಲಿ ನೀಡಲಾಗಿದೆ ಪರಿಶೀಲಿಸಿ ಅನುಮೋದಿಸಬಹುದಾಗಿದೆ.

ವಿಷಯ 10 : 2025–26ನೇ ಸಾಲಿನ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳು ಹಾಗೂ 2026–27ನೇ ಮುಂಗಡ ಪತ್ರದ ಅನುಮೋದನೆ.

ಟಿಪ್ಪಣಿ : 2025–26ನೇ ಸಾಲಿನ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳಿಗೆ ಕಾರಣಗಳನ್ನು 2026–27ನೇ ಸಾಲಿನ ಮುಂಗಡ ಪತ್ರದ ವಿವರವನ್ನು ಪುಟ ಸಂಖ್ಯೆ 49 ರಿಂದ 50 ರಲ್ಲಿ ನೀಡಲಾಗಿದೆ ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

ವಿಷಯ 11 :2025–26 ರ ಲಾಭ ವಿಲೆವಾರಿ

ಟಿಪ್ಪಣಿ : ಈ ನೋಟಿಸಿನೊಂದಿಗೆ ನೀಡಲಾದ 2025–26ನೇ ಸಾಲಿನ ಸಹಕಾರಿಯ ಲಾಭ ವಿಲೇವಾರಿ ವಿವರವನ್ನು ಪುಟ ಸಂಖ್ಯೆ 51 ರಲ್ಲಿ ನೀಡಲಾಗಿದೆ ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

ವಿಷಯ 12 : 2026–27ನೇ ಸಾಲಿನ ಲೆಕ್ಕ ಪರಿಶೋಧಕರ ನೇಮಕ ಮತ್ತು ಸಂಭಾವನೆ ಕುರಿತು.

ಟಿಪ್ಪಣಿ : ಲೆಕ್ಕ ಪರಿಶೋದಕರ ನೇಮಕ ಹಾಗೂ ಲೆಕ್ಕ ಪರಿಶೋಧಕರ ಸಂಭಾವನೆ ವಿಚಾರವಾಗಿ ಬಂದಿರುವ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಸದಸ್ಯರ ಅನುಮೋದನೆ ಪಡೆದು ತೀರ್ಮಾನ ಕೈಗೊಳ್ಳಲಾಗುವುದು.

ವಿಷಯ 13 : 2025–26ನೇ ಸಾಲಿನ ಆಡಳಿತ ಮಂಡಳಿಯ ನಡುವಳಿಕೆಗಳು ಅನುಮೋದನೆ.

ಟಿಪ್ಪಣಿ : ಈ ವಿಷಯದ ಬಗ್ಗೆ ಆಡಳಿತ ಮಂಡಳಿಯಲ್ಲಿ ಎಲ್ಲಾ ವಿಷಯಗಳನ್ನು ಪರಿಗಣಿಸಿ ಸಾಮಾನ್ಯ ಸಭೆಯ ಅನುಮೋದನೆಯನ್ನು ಪಡೆಯಲು ತೀರ್ಮಾನಿಸಲಾಯಿತು.

ವಿಷಯ 14 : ಬೈಲಾ ತಿದ್ದುಪಡಿಯ ಕುರಿತು ಚರ್ಚೆ.

ಟಿಪ್ಪಣಿ : ಸಹಕಾರಿಯ ಸದಸ್ಯರಿಗೆ ಇನ್ನೂ ಹೆಚ್ಚಿನ ಸೇವೆ ಒದಗಿಸುವ ನಿಟ್ಟಿನಿಂದ ಹಾಗೂ ಸಹಕಾರಿಯ ಇನ್ನೂ ಹೆಚ್ಚಿನ ಅಭಿವೃದ್ಧಿಯ ನಿರೀಕ್ಷೆಯಲ್ಲಿ ಈ ತಿದ್ದುಪಡಿಯನ್ನು ಪುಟ ಸಂಖ್ಯೆ 46 ಮತ್ತು 48 ರಲ್ಲಿ ಸೂಚಿಸಿದೆ. ಇದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ. (ತಿದ್ದುಪಡಿಯ ಪ್ರತಿಯನ್ನು ನೋಟೀಸಿನೊಂದಿಗೆ ಲಗತ್ತಿಸಲಾಗಿದೆ)

ವಿಷಯ 15 : ಸಿಬ್ಬಂದಿ ನೇಮಕಾತಿ ಮತ್ತು ರಾಜೀನಾಮೆ, ವೃಂದಬಲ, ಸೇವೆ ಖಾಯಂ, ವೇತನ ಶ್ರೇಣಿ ಮತ್ತು ಬೋನಸ್ ಬಗ್ಗೆ.

ಟಿಪ್ಪಣಿ : ಸಿಬ್ಬಂದಿ ನೇಮಕಾತಿ **ಮತ್ತು ರಾಜೀನಾಮೆ ,**ವೃಂದ ಬಲ ಸೇವೆ ಖಾಯಂ ವೇತನ ಶ್ರೇಣಿ ಮತ್ತು ಬೋನಸ್ ಬಗೆಗಿನ ಮಾಹಿತಿಯನ್ನು ಪುಟ ಸಂಖ್ಯೆ 52 ರಲ್ಲಿ ನೀಡಲಾಗಿದೆ ಅದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

ವಿಷಯ 16 : ಆಡಳಿತ ಮಂಡಳಿ ಸದಸ್ಯರು, ಶಾಖಾ ಸಮಿತಿ ಸದಸ್ಯರು ಹಾಗೂ ಇತರೆ ಉಪಸಮಿತಿ ಸದಸ್ಯರ ಸಭಾಭತ್ಯಾ, ಗೌರವ ಭತ್ಯೆಯನ್ನು ಪರಿಷ್ಕರಿಸುವ ಕುರಿತು.

ಟಿಪ್ಪಣಿ : ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಶಾಖಾ ಸಮಿತಿ ಸದಸ್ಯರು ಹಾಗು ಇತರೆ ಉಪಸಮಿತಿ ಸದಸ್ಯರ ಸಭಾಭತ್ಯಾ, ಗೌರವ ಭತ್ಯೆಯ ಪರಿಷ್ಕೃತ ಪ್ರತಿಯನ್ನು ನೀಡಲಾಗಿದ್ದು ಇದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

ವಿಷಯ 17 :ಸಹಕಾರಿಯ ಆಡಳಿತ ಮಂಡಳಿ, ಸದಸ್ಯರು ಹಾಗೂ ಸಿಬ್ಬಂದಿಗಳ ಅಧ್ಯಯನ ಪ್ರವಾಸದ ಕುರಿತು.
ಟಿಪ್ಪಣಿ : ಈ ಹಿಂದೆ ಕೈಗೊಂಡ ಅಧ್ಯಯನದ ಪ್ರವಾಸದ ರೀತಿ ಮುಂದೆಯು ಸಹ ಆಡಳಿತ ಮಂಡಳಿ, ಶಾಖಾ ಸಮಿತಿ ಸದಸ್ಯರು ಹಾಗೂ ಸಿಬ್ಬಂದಿಯವರಿಗೆ ಪ್ರವಾಸ ಕೈಗೊಳ್ಳಲು ಅನುಮೋದಿಸಬಹುದಾಗಿದೆ.

ವಿಷಯ 18 : ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರವಲೋಕನ.
ಟಿಪ್ಪಣಿ : ಕಾಲಕಾಲಕ್ಕೆ ಯಾವುದಾದರು ಅಭಿವೃದ್ಧಿ ಕೆಲಸಗಳನ್ನು ಕೈಗೊಂಡಾಗ ಹಾಗೂ ಇತರೆ ವ್ಯವಹಾರಗಳಲ್ಲಿ ಖರ್ಚು ವೆಚ್ಚಗಳಾದಾಗ ಮೀಸಲು ನಿಧಿಗಳನ್ನು ಸೂಕ್ತವಾಗಿ ಉಪಯೋಗಿಸಿಕೊಳ್ಳಲು ಸಭೆಯು ಅನುಮೋದಿಸಬಹುದಾಗಿದೆ.

ವಿಷಯ 19 : ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕರ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವಲ್ಲಿ ಆ ನೌಕರರ ಪಟ್ಟಿಯ ಪರಿಗಣನೆ.
ಟಿಪ್ಪಣಿ : ಯಾವುದೇ ತರಹದ ನೇಮಕಾತಿ ಆತರುವುದಿಲ್ಲ.

ವಿಷಯ 20 : ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ಉತ್ತಮ ಶಾಖಾ ಹಾಗೂ ಶಾಖಾ ಸಮಿತಿ ಪ್ರಶಸ್ತಿ,
ಟಿಪ್ಪಣಿ : 2025–26ನೇ ಸಾಲಿನಲ್ಲಿ ಹೆಚ್ಚು ಅಂಕ ಪಡೆದ ಸದಸ್ಯರ ಮಕ್ಕಳಿಗೆ 25–30 ಪ್ರಶಸ್ತಿಗಳನ್ನು ಪ್ರತಿಭಾ ಪುರಸ್ಕಾರ ಹಾಗೂ ಉತ್ತಮ ಶಾಖಾ ಮತ್ತು ಉತ್ತಮ ಶಾಖಾಸಮಿತಿ ಪ್ರಶಸ್ತಿ ನೀಡುವುದನ್ನು ತಮ್ಮ ಗಮನಕ್ಕೆ ತರಲಾಗಿದೆ.

ವಿಷಯ 21 ಸಹಕಾರಿಗೆ ಸ್ವಂತ ನಿವೇಶನ ಹಾಗೂ ಕಟ್ಟಡಗಳ ನಿರ್ಮಾಣದ ಬಗ್ಗೆ ಅನುಮೋದನೆ.
ಟಿಪ್ಪಣಿ :ನಮ್ಮ ಸಹಕಾರಿಯ ಶಾಖೆಗಳಿಗೆ ಸೂಕ್ತ ಕಂಡ ಸ್ಥಳಗಳಲ್ಲಿ ಸ್ವಂತ ನಿವೇಶನ ಹಾಗೂ ಕಟ್ಟಡಗಳ ನಿರ್ಮಾಣ ಮಾಡಲು ಆಡಳಿತ ಮಂಡಳಿಗೆ ಪೂರ್ಣ ಅಧಿಕಾರವನ್ನು ಕೊಡಲು ಸಭೆಯು ಅಂಗೀಕರಿಸಬಹುದಾಗಿದೆ.

ವಿಷಯ 22 : ನೂತನ ಶಾಖೆಗಳ ಪ್ರಾರಂಭಿಸುವ ಬಗ್ಗೆ ಚರ್ಚೆ.
ಟಿಪ್ಪಣಿ : ಈ ಬಗ್ಗೆ ಸಾಮಾನ್ಯ ಸಭೆಯು **ಹೊಸಪೇಟೆ, ಬಳ್ಳಾರಿ, ಹಾಸನ, ಹುಬ್ಬಳ್ಳಿ ಜಿಲ್ಲೆ** ಶಾಖೆಗಳನ್ನು ತೆರೆಯಲು ಅನುಮೋದನೆಯನ್ನು ನೀಡಲು ಕೋರಲಾಗಿದೆ.

ವಿಷಯ 23 : ಶಾಖೆಗಳನ್ನು ಸ್ಥಳಾಂತರಿಸುವ ಬಗ್ಗೆ ಚರ್ಚೆ.
ಟಿಪ್ಪಣಿ : ಈ ಬಗ್ಗೆ ಸಾಮಾನ್ಯ ಸಭೆಯು ರಾಜಾಜಿನಗರ, ಯಲಹಂಕ, ಬಿ.ಟಿ.ಎಂ ಲೇಔಟ್ ಶಾಖೆಗಳನ್ನು ಸ್ಥಳಾಂತರಿಸಲು ಅನುಮೋದನೆಯನ್ನು ನೀಡಲು ಕೋರಲಾಗಿದೆ

ವಿಷಯ 24 : ಅನುತ್ಪಾದಕ ಸಾಲಗಳಿಗೆ ಪ್ರವದಾನ ಮಾಡುವ ಬಗ್ಗೆ.
ಟಿಪ್ಪಣಿ : ಯಾವುದೇ ತರಹದ ಅನುತ್ಪಾದಕ ಸಾಲಗಳಿಗೆ ಪ್ರವದಾನ ಮಾಡಿರುವುದಿಲ್ಲ.

ವಿಷಯ 25 : ಮಂಡಳಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ
ಟಿಪ್ಪಣಿ : ಸಹಕಾರಿಯಲ್ಲಿ ಬಡ್ಡಿಯೇತರ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದ್ದು ಇವುಗಳಲ್ಲಿ ತಮ್ಮ ಸಲಹೆ ಸೂಚನೆಗಳನ್ನು ತಿಳಿಸುವುದರೊಂದಿಗೆ ವಿಷಯವನ್ನು ಚರ್ಚಿಸಿ ಅನುಮೋದಿಸಬಹುದು.

ವಿಷಯ 26 : ನಿರ್ದೇಶಕರು ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳ ಹಾಗೂ ಸುಸ್ತಿಯ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮಗಳ ಕುರಿತು.
ಟಿಪ್ಪಣಿ : ಯಾವುದೇ ತರಹದ ಸುಸ್ತಿಸಾಲಗಳು ಇರುವುದಿಲ್ಲ.

ವಿಷಯ 27 : ಕಾಲಕಾಲಕ್ಕೆ ಠೇವಣಿ ಮತ್ತು ಸಾಲಗಳ ಬಡ್ಡಿ ಪರಿಷ್ಕರಣೆಗಳ ಅನುಮೋದನೆ.
ಟಿಪ್ಪಣಿ : ದೈನಂದಿನ ವ್ಯವಹಾರದಲ್ಲಿ ಠೇವಣಿಗಳ ಮೇಲೆ ತಗಲುವ ಬಡ್ಡಿ ಮತ್ತು ಸಾಲಗಳ ಮೇಲೆ ವಿದಿಸಬಹುದಾದ ಬಡ್ಡಿಯ ಪ್ರಮಾಣವನ್ನು ಕಾಲಕಾಲಕ್ಕೆ ತಕ್ಕಂತೆ ಪರಿಷ್ಕರಿಸಲು ಆಡಳಿತ ಮಂಡಳಿಗೆ ಪೂರ್ಣ ಅಧಿಕಾರವನ್ನು ಕೊಡಲು ಕೋರಲಾಗಿದೆ.

ವಿಷಯ 28 : 2026–27ನೇ ಸಾಲಿಗೆ ಆಂತರಿಕ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು
ಟಿಪ್ಪಣಿ : ಈ ವಿಷಯಕ್ಕೆ ಸಂಭದಿಸಿದಂತೆ ಬಂದಿರುವ ಉದ್ಧರಣ (Quatation) ಯನ್ನು ಪರಿಶೀಲಿಸಿ ಅನುಮೋದಿಸಲು ಕೋರಿದೆ.

ವಿಷಯ 29 : ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ವಾಟ್ಸ್‌ಆಪ್ ಮೂಲಕ ಕಳುಹಿಸಲು ಅನುಮತಿಸುವ ಕುರಿತು
ಟಿಪ್ಪಣಿ :ಬೈಲಾ ತಿದ್ದುಪಡಿಯಾದ ಪ್ರಕಾರ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ವಾಟ್ಸ್‌ಆಪ್ ಮೂಲಕ ಕಳುಹಿಸಲು ತಿರ್ಮಾನಿಸಬಹುದಾಗಿದೆ.

ವಿಷಯ 30 : ರಜತ ಮಹೋತ್ಸವ ಆಚರಣೆಯ ಬಗ್ಗೆ.
ಟಿಪ್ಪಣಿ :ಮುಂದಿನ ವರ್ಷ ನಮ್ಮ ಸಂಸ್ಥೆಯು 25 ವರ್ಷಗಳನ್ನು ಪೂರೈಸುತಿರುವ ವೇಳೆಯಲ್ಲಿ ಅದಕ್ಕೆ ಬರಿಸಬಹುದಾದ ವೆಚ್ಚಗಳನ್ನು ಬರಿಸಲು ಸಾಮಾನ್ಯ ಸಭೆಯು ಅನುಮೋದನೆನೀಡಬಹುದಾಗಿದೆ.

ವಿಷಯ 31 : ಸದಸ್ಯರ ಪ್ರಶ್ನೆಗಳು ಮತ್ತು ಸಲಹೆಗಳು
ಟಿಪ್ಪಣಿ : ಈ ವಿಚಾರವಾಗಿ ಚರ್ಚಿಸಲು ಇಚ್ಚಿಸುವವರು ಸಾಮಾನ್ಯ ಸಭೆ ನಡೆಯುವ 7 ದಿನಗಳ ಮುಂಚಿತವಾಗಿ ಲಿಖಿತ ರೂಪದಲ್ಲಿ ಸಹಕಾರಿಗೆ ಕಳುಹಿಸಲು ಸಾಮಾನ್ಯ ಸಭೆಯ ನೋಟಿಸಿನಲ್ಲಿ ಸೂಚಿಸಲಾಗಿದೆ ಈ ಕುರಿತು ಯಾವುದೇ ಸಲಹೆಗಳು ಬಂದಿರುವುದಿಲ್ಲ.

ವಿಷಯ 32 : ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು
ಟಿಪ್ಪಣಿ : ಅಧ್ಯಕ್ಷರ ಅಪ್ಪಣೆಯ ಮೇರೆಗೆ ಯಾವುದೇ ವಿಷಯವನ್ನು ಚರ್ಚಿಸಲು ಇಚ್ಚಿಸುವವರು ದಿನಾಂಕ 01–09–2026 ರೊಳಗೆ ಲಿಖಿತವಾಗಿ ಆಡಳಿತ ಕಛೇರಿಗೆ ವಿಷಯದ ವಿವರ ಸಹಿತ ಕೋರಿಕೆ ಸಲ್ಲಿಸತಕ್ಕದ್ದು. ಅದರಂತೆ ಯಾರಾದರು ಕೋರಿಕೆ ಸಲ್ಲಿಸಿದ್ದಲ್ಲಿ ಸಾಮಾನ್ಯ ಸಭೆಯ ವೇಳೆಗೆ ಪ್ರತ್ಯೇಕವಾದ ಟಿಪ್ಪಣಿ ನೀಡಲಾಗುವುದು.

ವಿಷಯ 33 : ವಂದನಾರ್ಪಣೆ

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ

ಅಧ್ಯಕ್ಷರ ನುಡಿ

ಸಂಸ್ಥಾಪಕ ಅಧ್ಯಕ್ಷರು

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
B.E. (Civil) A.M.I.E.



ಆತ್ಮೀಯ ಸಹೃದಯ ಸೌಹಾರ್ದ ಸಹಕಾರಿ ಸದಸ್ಯ ಬಂಧುಗಳೇ

ತಮ್ಮೆಲ್ಲರಿಗೂ ಆದರದ ಸ್ವಾಗತ ಮತ್ತು ಹೃತ್ಪೂರ್ವಕ ವಂದನೆಗಳು.


ಪರಾಭವನಾಮ ಸಂವತ್ಸರ ಶ್ರಾವಣ–ಭಾದ್ರಪದ ಮಾಸ, ಸೆಪ್ಟೆಂಬರ್ 12ನೇ ಈ ಶುಭ ದಿನದಂದು ನಡೆಯುತ್ತಿರುವ ನಮ್ಮ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಗೆ ಆಗಮಿಸಿರುವ ಎಲ್ಲಾ ಸಹಕಾರಿಯ ಸರ್ವ ಸದಸ್ಯರಿಗೂ, ಆಡಳಿತ ಮಂಡಳಿ, ಬಿ.ಸಿ.ಎಂ. ಹಾಗೂ ಸಿಬ್ಬಂದಿಯವರಿಗೂ ಗೌರವ ಪೂರ್ವಕ ಪ್ರಣಾಮಗಳು.

ಸಹಕಾರಿಯು ಯಶಸ್ವಿ 24 ವಸಂತಗಳನ್ನು ಪೂರೈಸಿ 25ನೇ ವಸಂತಕ್ಕೆ ಕಾಲಿಡುತ್ತಿರುವ ಈ ಶುಭ ಸಂದರ್ಭದಲ್ಲಿ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಗೆ ನಮ್ಮ ಆತ್ಮೀಯ ಕರೆಗೆ ಓಗೊಟ್ಟು ತಾವೆಲ್ಲರು "**“ಸಮೃದ್ಧಿ ಮ್ಯಾನರ್ ಪಾರ್ಟಿ ಹಾಲ್”**, ವೆಂಕಟೇಶ್ವರನಗರ ಈ ಸಭಾಂಗಣದಲ್ಲಿ ಉಪಸ್ಥಿತರಿರುವ ಮೂಲಕ ನಮ್ಮ ಸಹಕಾರಿಯು ಶಿಸ್ತನ್ನು ಬೆಳಸಿಕೊಂಡು ಸಾಮೂಹಿಕ ನಾಯಕತ್ವದಲ್ಲಿ ನಂಬಿಕೆಯನ್ನಿಟ್ಟು ಪಾರದರ್ಶಕ ಆಡಳಿತ ನಿರ್ವಹಣೆಯನ್ನು ಮೈಗೂಡಿಸಿಕೊಂಡಿರುವ ಈ ಸಂಸ್ಥೆ ಇಂದು ಕರ್ನಾಟಕ ರಾಜ್ಯದ ಪ್ರತಿಷ್ಟಿತ ಸೌಹಾರ್ದ ಸಹಕಾರಿಗಳಲ್ಲಿ ಒಂದಾಗಲು ಸಹಕರಿಸಿದ ತಮ್ಮೆಲ್ಲರಿಗೂ ಇಂದು ನಡೆಯುತ್ತಿರುವ ಸಹಕಾರಿಯ 2025–2026ನೇ ಸಾಲಿನ ಸಾಮಾನ್ಯ ಸಭೆಗೆ ಆಗಮಿಸಿರುವ ತಮಗೆಲ್ಲರಿಗೂ ಆಡಳಿತ ಮಂಡಳಿ, ಬಿ.ಸಿ.ಎಂ. ಹಾಗೂ ಸಿಬ್ಬಂದಿಯ ಪರವಾಗಿ ಆತ್ಮೀಯ ಸ್ವಾಗತ ಬಯಸುತ್ತಾ ಕೃತಘ್ನತೆಗಳನ್ನು ಸಲ್ಲಿಸುತ್ತೇನೆ.

ಸಹಕಾರಿಯು ಕಳೆದ 24 ವರ್ಷಗಳಿಂದಲೂ ಸದಸ್ಯರ ಏಳಿಗೆಗಾಗಿ ನಿರಂತರ ಸೇವೆ ನೀಡುತ್ತಾ ತಮ್ಮ ಆರ್ಥಿಕ ಹಾಗೂ ದೈನಂದಿನ ವ್ಯವಹಾರವನ್ನು ಪಾರದರ್ಶಕವಾಗಿ ಹಾಗು ಸುಗಮವಾಗಿ ನಿರ್ವಹಿಸುತ್ತ ಬಂದಿದೆ.ಇದಕ್ಕೆಲ್ಲ ನಿಮ್ಮೆಲ್ಲರ ಸಹಕಾರವೇ ಕಾರಣ.ಈ ಬೆಳವಣಿಗೆಗೆ ಸಹಕರಿಸಿದ ತಮ್ಮೆಲ್ಲರನ್ನು ಮತ್ತೊಮ್ಮೆ ಅಭಿನಂದಿಸುತ್ತಾ ಸಹಕಾರಿಯ 2025–2026ನೇ ಸಾಲಿನ ಆರ್ಥಿಕ ವರ್ಷದ ವಾರ್ಷಿಕ ವರದಿಯನ್ನು ಅತ್ಯಂತ ಸಂತೋಷದಿಂದ ಇಂದು ತಮ್ಮ ಮುಂದೆ ಮಂಡಿಸುತ್ತಿದ್ದೇನೆ.

ಈ ನಮ್ಮ ಸಹಕಾರಿಯು ತಮಗೆ ತಿಳಿದಿರುವಂತೆ 2002ನೇ ಇಸವಿಯ ಮೇ 24 ರಂದು ಕೇವಲ 240 ಜನ ಸದಸ್ಯರನ್ನೊಳಗೊಂಡು, 25 ಲಕ್ಷರೂ ಷೇರು ಬಂಡವಾಳದೊಂದಿಗೆ ತುಮಕೂರು ಜಿಲ್ಲೆಯ ಪಾವಗಡದಲ್ಲಿ ಪ್ರಾರಂಭವಾದ ಈ ಸಂಸ್ಥೆ ಇಂದು 2025–2026ನೇ ಸಾಲಿನ ಆರ್ಥಿಕ ವರ್ಷಕ್ಕೆ 17270 ಜನ ಸದಸ್ಯರೊಂದಿಗೆ ಒಟ್ಟು ರೂ 3.45 ಕೋಟಿಗೂ ಹೆಚ್ಚು ಷೇರು ಮೊತ್ತವನ್ನು ದಾಖಲಿಸಿದ್ದು, ರೂ. 325.44 ಕೋಟಿ ಠೇವಣಿ, ರೂ 238.38 ಕೋಟಿ ಸಾಲ ವಿತರಿಸಿ ಒಟ್ಟು ವ್ಯವಹಾರ ರೂ 672.63 ಕೋಟಿ ದಾಖಲಿಸಿದು, ನಿವ್ವಳ ರೂ 648.43 ಕೋಟಿ ಲಾಭಗಳಿಸಿದೆ. ಪ್ರಸಕ್ತ ರಾಜ್ಯಾದ್ಯಂತ 12 ಜಿಲ್ಲೆಗಳಲ್ಲಿ 33 ಶಾಖೆಗಳನ್ನು ಹೊಂದಿದ್ದು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಸೊಸೈಟಿ ಪ್ರಾರಂಭದಿಂದ ಮಾರ್ಚ 2026ರ ಅಂತ್ಯದ ಆರ್ಥಿಕ ಪ್ರಗತಿಯ ಪಕ್ಷಿನೋಟ



ಹಿಂದಿನ ಸಾಮಾನ್ಯ ಸಭೆಯಲ್ಲಿ ತಮಗೆ ತಿಳಿಸಿ ತಮ್ಮ ಅನುಮೋದನೆ ಪಡೆದಂತೆ ಈಗಾಗಲೇ ಎಲ್ಲಾ ಶಾಖೆಗಳೂ ಸಹ ಆಧುನಿಕ ಮಟ್ಟದ ಪೀಠೋಪಕರಣಗಳು, ಸಾಫ್ಟ್‌ವೇರ್ (ತಾಂತ್ರಿಕತೆ) ಹಾಗೂ ಎಲ್ಲಾ ಸೌಲಭ್ಯಗಳನ್ನು ಒಳಗೊಂಡಿರುವ ಸುಸಜ್ಜಿತ ಶಾಖೆಗಳಾಗಿವೆ. ಅದರಲ್ಲಿಯು ವಿಶೇಷವಾಗಿ ಸ್ವಂತ 7 ಕಟ್ಟಡಗಳನ್ನು ಒಳಗೊಂಡಿರುವ ಆಡಳಿತ ಕಚೇರಿಯ ಕಟ್ಟಡವನ್ನೊಳಗೊಂಡ ಡಾ॥ ಶಿವರಾಮಕಾರಂತನಗರ ಶಾಖೆ. ಹೆಬ್ಬಗೋಡಿ ಶಾಖೆ ಮತ್ತು ಲಿಂಗದಹಳ್ಳಿ, ತುಮಕೂರು 4ನೇ ಶಾಖೆ, ಕೊರಟಗೆರೆ ಶಾಖೆ ಹಾಗೂ ಶಿರಾ ಶಾಖೆ, ಪಾವಗಡ ಶಾಖೆಗಳು, RBI ಮಾರ್ಗ ಸೂಚಿ ಅನ್ವಯ ಭದ್ರತಾ ಕೊಠಡಿ ಮತ್ತು ಲಾಕರ್‌ಗಳನ್ನು ಒಳಗೊಂಡಿವೆ ಮತ್ತು ಜಿಗಣಿ, ತುಮಕೂರು, ಮಧುಗಿರಿ, ಲಿಂಗದಹಳ್ಳಿ ಮತ್ತು ಪಾವಗಡದಲ್ಲಿ ಸ್ವಂತ ನಿವೇಶನಗಳನ್ನು ಹೊಂದಿದೆ.

ಸಹಕಾರಿ ಕ್ಷೇತ್ರದಲ್ಲಿ ವಿಶಿಷ್ಟ ರೀತಿಯಲ್ಲಿ ಸ್ಥಳೀಯ ಶಾಖಾ ಸಮಿತಿಗಳಲ್ಲಿ 250 ಕ್ಕಿಂತ ಹೆಚ್ಚು ಸದಸ್ಯರನ್ನು ಒಳಗೊಂಡಿರುವ ಸಮಿತಿಗಳ ಪೂರ್ಣ ಸಹಕಾರದೊಂದಿಗೆ ಸಹಕಾರಿಯ ಎಲ್ಲಾ ಶಾಖೆಗಳು ಯಶಸ್ವಿಯಾಗಿ ಮತ್ತು ಲಾಭದಾಯಕವಾಗಿ ಸ್ಥಳಿಯವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಈ ಶಾಖಾ ಸಮಿತಿಗಳ ಸದಸ್ಯರಿಗೂ ಮತ್ತು ಸಿಬ್ಬಂದಿಗೂ ವಿಶೇಷವಾಗಿ ಅಭಿನಂದಿಸುತ್ತೇನೆ. ಸಹಕಾರಿಯ ಎಲ್ಲಾ 33 ಶಾಖೆಗಳನ್ನು ಮತ್ತು ಪ್ರಧಾನ ಕಛೇರಿಯನ್ನು ಸಹ ಗಣಕೀಕೃತ ಶಾಖೆಗಳನ್ನಾಗಿ ಪರಿವರ್ತಿಸಿದ್ದು ಈ ಬದಲಾವಣೆಗೆ ಸಹಕರಿಸಿದ ಎಲ್ಲಾ ಆಡಳಿತ ವರ್ಗ ಮತ್ತು ಸಿಬ್ಬಂದಿಗಳಿಗೆ ತುಂಬು ಹೃದಯದ ಅಭಿನಂದನೆಗಳನ್ನು ತಿಳಿಸಪಡುತ್ತೇನೆ.

ಸನ್ಮಾನ್ಯ **ಡಾ। ಎ.ಪಿ.ಜೆ. ಅಬ್ದುಲ್ ಕಲಾಂ** ರವರ ಮಾತಿನಂತೆ' ಯಶಸ್ವಿಯಾಗುತ್ತೇನೆ ಎಂಬ ನಿರ್ಧಾರ ನಿಮ್ಮಲ್ಲಿ ಪ್ರಬಲವಾಗಿದ್ದರೆ ಸೋಲು ಎಂದಿಗೂ ನಿಮ್ಮನ್ನು ಹಿಮ್ಮೆಟ್ಟಿಸುವುದಿಲ್ಲ" ಎಂಬ ಹಾಗೆ ನಮ್ಮ ಸಹಕಾರಿಯು 24ನೇ ವಾರ್ಷಿಕ ಸಾಮಾನ್ಯ ಸಭೆಯ ಸಂದರ್ಭದಲ್ಲಿ ತಾವುಗಳು ದೃಢವಾದ ನಿರ್ಧಾರದೊಂದಿಗೆ ಅನುಮೋದಿಸಿದ ಸಹಕಾರಿಯ ಸಮಾಜ ಮುಖಿ ಕಾರ್ಯಗಳು ಹಾಗು ಮುಂದಿನ ಯೋಜನೆಗಳನ್ನು ಪರಿಪೂರ್ಣತೆಯೊಂದಿಗೆ ನಾವು ಕಾರ್ಯರೂಪಕ್ಕೆ ತಂದಿದ್ದು ಕಳೆದ ವರ್ಷಗಳಲ್ಲಿ ನಮ್ಮ ಸಹಕಾರಿಯು ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ವೈದ್ಯಕೀಯ, ಹಾಗೂ ಪ್ರಕೃತಿ ವಿಕೋಪ ನಿವಾರಣೆ ಕಾರ್ಯಗಳಿಗೆ ಸಹಾಯ ಹಸ್ತ ನೀಡುತ್ತಾ ಬಂದಿದೆ. ಸಹಕಾರಿಯು ಹೇಮಾವತಿ ಎಂಬ ಗಡಿಗ್ರಾಮದಲ್ಲಿ ಪ್ರತೀ ವರ್ಷ ನಡೆಯುವ ಶ್ರೀ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಪ್ರತೀ ವರ್ಷ ಅಗ್ನಿಕುಂಡ ದಿನದಂದು ಬರುವ ಒಂದು ಲಕ್ಷ ಜನ ಭಕ್ತಾಧಿಗಳಿಗೆ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೂ ಉಚಿತವಾಗಿ ಅನ್ನಸಂತರ್ಪಣೆ ಮಾಡುತ್ತಾ ಬಂದಿದೆ. ಇದರ ನೇತೃತ್ವ ವಹಿಸುತ್ತಿರುವ ಶ್ರೀಯುತ ಬಿ.ಹೆಚ್ ರಾಮಲಿಂಗಾರೆಡ್ಡಿ ಯವರಿಗೂ ಈ ಅನ್ನದಾಸೋಹದ ದಿನ ಪಾಲ್ಗೊಂಡು ಕಾರ್ಯನಿರ್ವಹಿಸುವ ಸಹಕಾರಿಯ ಎಲ್ಲಾ ಸದಸ್ಯರಿಗು ಹಾಗು ಆಡಳಿತ ಮಂಡಳಿಯ ನಿರ್ದೇಶಕರಿಗೂ, ಸಿಬ್ಬಂದಿ ವರ್ಗದವರಿಗೂ ಮತ್ತು ಹೆಮಾವತಿಯಲ್ಲಿ ಅನ್ನದಾಸೋಹ ಸಮಿತಿಯವರಿಗೂ ಸದಸ್ಯರ ಪರವಾಗಿ ತುಂಬು ಹೃದಯದ ಕೃತಘ್ನತೆಗಳು.

ಸಹಕಾರಿಯ ವಿಶೇಷವೆಂದರೆ ಆಡಳಿತದಲ್ಲಿ ಪಾಲ್ಗೊಂಡಿರುವ ನಿರ್ದೇಶಕರು, ಶಾಖಾ ಸಮಿತಿಯ ಸದಸ್ಯರಿಗೂ, ಹಾಗೂ ಇತರೆ ಆಹ್ವಾನಿತರಿಗೆ ಪ್ರತಿ ವರ್ಷ 2 ದಿನಗಳ ವಿಶೇಷ ತರಬೇತಿ ಶಿಬಿರವನ್ನು ಹಮ್ಮಿಕೊಂಡು, ಯಶಸ್ವಿ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಮತ್ತು ನಮ್ಮ ಸಹಕಾರಿಯಲ್ಲಿ ಸುಮಾರು 25 ಜನಕ್ಕೂ ಮೀರಿ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ ಅವರಿಗೆ ದಿನನಿತ್ಯದ ಸಹಕಾರಿಯ ಎಲ್ಲ ವ್ಯವಹಾರಗಳನ್ನು (ತಂತ್ರಜ್ಞಾನದ ಸಹಾಯದೊಂದಿಗೆ ಡಿಜಿಟಲ್ ಮಾಡ್ಯೂಲ್ ಮಾಡಿ) ತರಬೇತಿ ಕೊಟ್ಟು ಅವರಿಂದ ಸಿಬ್ಬಂದಿ ವರ್ಗದವರಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ಶಾಖಾವಾರು ತರಬೇತಿ ವ್ಯವಸ್ಥೆಯನ್ನು ನಮ್ಮ ಸಂಸ್ಥೆಯಿಂದಲೇ ಕೊಡಲಾಗುತ್ತಿದೆ. ಮತ್ತು ಸಂಯುಕ್ತ ಸಹಕಾರಿಯು ಆಯೋಜಿಸುವ ಪ್ರತೀ ತರಬೇತಿಯಲ್ಲೂ ನಮ್ಮ ಸಹಕಾರಿಯ ಆಡಳಿತ ಮಂಡಳಿ, ಶಾಖಾ ಸಮಿತಿ. ಸಿಬ್ಬಂದಿಗಳು ಪಾಲ್ಗೊಳ್ಳುತ್ತಾರೆ.ಮತ್ತು ಇದುವರೆಗೂ ಸಂಯುಕ್ತ ಸಹಕಾರಿಯು ಆಯೋಜಿಸಿದ ಎಲ್ಲಾ ತರಬೇತಿ ಕಾರ್ಯಕ್ರಮಗಳಲ್ಲಿ ಹಾಗೂ ಶಿಬಿರಗಳಲ್ಲಿ ನಮ್ಮ ಸಿಬ್ಬಂದಿ ಪಾಲ್ಗೊಂಡಿದ್ದಾರೆ. ಹಾಗೆಯೇ ಸಂಯುಕ್ತ ಸಹಕಾರಿಯು ನೂತನವಾಗಿ ಪ್ರಾರಂಬಿಸಿರುವ 6 ತಿಂಗಳ ಡಿಪ್ಲಮೋ ಕೋರ್ಸನ್ನು ಸಹ ನಮ್ಮ ಸಿಬ್ಬಂದಿಗಳಿಗೆ ನೀಡುತ್ತಿದ್ದು ಇದರಿಂದ ಶಾಖೆಗಳಲ್ಲಿ ಸಿಬ್ಬಂದಿಗೂ ಮತ್ತು ಶಾಖಾ' ಸಮಿತಿ ಸದಸ್ಯರಿಗೂ ವೃತ್ತಿ ಪರತೆಯನ್ನು ಹೆಚ್ಚಿಸಲು ಸಾಧ್ಯವಾಗಿದೆ.

ಪ್ರಧಾನ ಕಛೇರಿಯ ಕಾರ್ಯಕ್ಷಮತೆ, ಪರಿಶೀಲನೆ ಮತ್ತು ಅಂತರಿಕ ನಿಯಂತ್ರಣ ಹೆಚ್ಚಿಸಲು ನಾಲ್ಕು ಜನ ಆಡಳಿತಗಾರರನ್ನು ನೇಮಿಸಿಕೊಂಡು ಅವರ ಕೆಳಗೆ ನಾಲ್ಕು ವಿಭಾಗಳಾಗಿ ವಿಂಗಡಿಸಿ ಅವರ ಪ್ರತಿಯೊಂದು ವಿಭಾಗದಲ್ಲಿ ಇಬ್ಬರು ಸಿಬ್ಬಂದಿಯನ್ನು ನೇಮಿಸಿ ಒಂಬತ್ತು ಶಾಖೆಗಳ ಪೂರ್ಣಜವ್ಬಾದಾರಿಯನ್ನು ಕೂಟ್ಟು ಎಲ್ಲಾ ಶಾಖೆಗಳ ಪರಿಪೂರ್ಣವಾಗಿ ನೆಡೆಯಲು ಕ್ರಮ ಕೈಗೂಳಲಾಗಿದೆ. ಪೂರ್ಣ ಪ್ರಮಾಣದ ಸಾಫ್ಟ್‌ವೇರ್‌ನ್ನು (ತಾಂತ್ರಿಕತೆ) ಪ್ರಧಾನ ಕಛೇರಿಗೆ ವರ್ಗಾಯಿಸಿ, ಎಲ್ಲಾ ವ್ಯವಹಾರಗಳನ್ನು ನಿಯಂತ್ರಿಸಲಾಗಿದೆ.

ನಮ್ಮ ನಡೆ ಗುಣಾತ್ಮಕದ ಕಡೆ ನಿರ್ದೇಶಕರು ಸದಸ್ಯರು ಮತ್ತು ಸಿಬ್ಬಂದಿ ಒಳಗೊಂಡ ಹನ್ನೊಂದು ಸಾಲ ಮಂಜೂರಾತಿ ಸಮಿತಿಯು ಕೂಂಡೊಯ್ಯಲು, ಪಾರದರ್ಶಕತೆ ಅಳವಡಿಸಲು ಸಿಇಓ ಪರ ಪ್ರಧಾನ ಕಛೇರಿಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸಿಬ್ಬಂದಿ ಶಾಖಾ ಸಮಿತಿ ಅಧ್ಯಕ್ಷರು, ಅಭಿವೃದ್ದಿ ಸಮಿತಿ ಮುಖ್ಯಸ್ಥರು, ವ್ಯವಸ್ಥಾಪಕರು, ಮಾಸಿಕ ಮತ್ತು ತ್ರೈಮಾಸಿಕ ಲೆಕ್ಕಪರಿಶೋಧಕರು, ನಗದು ಗುಮಾಸ್ತರು, ಸಾಲ ಸಮಿತಿಗಳನ್ನು ರಚಿಸಿ ಪ್ರತಿ ಸಾಲಕ್ಕೂ ಆನ್‌ಲೈನ್‌ನಲ್ಲಿ ಸಭೆಗಳನ್ನು ನಡೆಸಿ ಪರಿಶೀಲನೆ ಮತ್ತು ಮಂಜೂರಾತಿ ಕೊಡಲಾಗುತ್ತಿದೆ. ಸಾಲಗಳನ್ನು ಕೊಡಲು ಶಾಖೆಗಳಿಗೆ ಗುರಿಯನ್ನು ನೀಡಲಾಗಿದೆ.

ಸದಸ್ಯರ ಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಪ್ರತೀ ವರ್ಷವೂ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡುತ್ತಾ ಬಂದಿದೆ. ಹಾಗೆಯೇ ಸಾಮಾನ್ಯ ಸಭೆಯಲ್ಲೂ ಸಭೆಗೆ ಆಗಮಿಸಿರುವ ಸದಸ್ಯರಿಗೆ ನುರಿತ ತರಬೇತುದಾರರಿಂದ ಪ್ರಮುಖ ವಿಷಯಗಳ ಬಗ್ಗೆ ಮಾಹಿತಿ ಹಾಗು ಉಪನ್ಯಾಸ ನೀಡುವ ಕಾರ್ಯಕ್ರಮಗಳನ್ನು ಸಹಕಾರಿಯು ಯಶಸ್ವಿಯಾಗಿ ನೆರವೇರಿಸುತ್ತಿದೆ.

ಸಿಬ್ಬಂದಿಗಳಲ್ಲಿ ಪ್ರಾಮಾಣಿಕತೆ ಮತ್ತು ದಕ್ಷತೆ ಹೆಚ್ಚಿಸಲು ಹಾಗೂ ಶಾಖಾ ಸಮಿತಿಯ ಕಾರ್ಯಕ್ಷಮತೆ ಹೆಚ್ಚಿಸಲು ಪ್ರತೀ ವರ್ಷ ಉತ್ತಮ ಶಾಖೆ ಹಾಗೂ ಉತ್ತಮ ಶಾಖಾ ಸಮಿತಿ ಪುರಸ್ಕಾರಗಳನ್ನು ನೀಡುತ್ತಾ ಬಂದಿದೆ. ಹಾಗೆಯೇ ಸಹಕಾರಿಯ ದೈನಂದಿನ ವ್ಯವಹಾರಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಗ್ರಾಹಕರನ್ನು ಕೂಡ ಗುರುತಿಸುವ ಮೂಲಕ ಉತ್ತಮ ಗ್ರಾಹಕರೆಂದು ಗೌರವಿಸಿದೆ.

ಸದಸ್ಯರ ಸಾಲಗಳಿಗೆ ವಿಮೆ ಒದಗಿಸುವುದು, ಹಾಗೂ ಸಿಬ್ಬಂದಿಗೆ ಆರೋಗ್ಯದ ಮೂರು ಲಕ್ಷ ಅಥವಾ ಆಸ್ಪತ್ರೆಯ ಶೇ. 80% ರಷ್ಟು ಖರ್ಚು, ಆಡಳಿತ ಮಂಡಳಿಯ ನಿರ್ದೇಶಕರಿಗೆ ಒಂದು ಲಕ್ಷ ಅಥವಾ ಶೇಕಡ 50% ಆಸ್ಪತ್ರೆಯ ಖರ್ಚು ಶಾಖಾ ಸಮಿತಿಯ ಅಧ್ಯಕ್ಷರಿಗೆ 50 ಸಾವಿರ ಅಥವಾ ಶೇ. 30% ಆಸ್ಪತ್ರೆಯ ಖರ್ಚು, ಶಾಖಾ ಸಮಿತಿಯ ಸದಸ್ಯರಿಗೆ 40 ಸಾವಿರ ಅಥವಾ ಶೇ.20% ಆಸ್ಪತ್ರೆಯ ಖರ್ಚು, ಸಿಬ್ಬಂದಿಯ ಕುಟುಂಬಕ್ಕೆ 50 ಸಾವಿರ ಅಥವಾ ಶೇ.30% ಆಸ್ಪತ್ರೆಯ ಖರ್ಚು ಆಡಳಿತದಲ್ಲಿ ತೊಡಗಿರುವ ಸದಸ್ಯರಿಗೆ 4 ಲಕ್ಷ ರೂಗಳ ನಗದು ರಹಿತ ಆರೋಗ್ಯ ವಿಮೆ. 10 ಲಕ್ಷ ರೂಗಳ ಅಪಘಾತ ವಿಮೆ. 15 ಲಕ್ಷ ರೂಗಳ ಪೋಸ್ಟ್ ಆಫೀಸ್ ಅಪಘಾತ ವಿಮೆ, ಸಹಕಾರಿಯ ಎಲ್ಲಾ ಸಿಬ್ಬಂದಿಗಳ ಸಹಜ ಸಾವಿಗೆ 10 ಲಕ್ಷಗಳ ಜೀವ ವಿಮೆ ಮತ್ತು ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆ ಮತ್ತು ಪ್ರಧಾನ ಮಂತ್ರಿ ಜೀವನ್ ಭೀಮಾ ಯೋಜನೆ ಅಡಿಯಲ್ಲಿ ಆರೋಗ್ಯ ವಿಮೆ, ಯಶಸ್ವಿನಿ ಯೋಜನೆ, ಸಿಬ್ಬಂದಿಗಳಿಗೆ ಭವಿಷ್ಯ ನಿಧಿ, ರಾಷ್ಟ್ರೀಯ ಪಿಂಚಣಿ ಯೋಜನೆ (NPS), ಖಾಯಂ ಸಿಬ್ಬಂದಿಗಳಿಗೆ ಬೋನಸ್ ವಿತರಣೆ, ಅಧ್ಯಯನ ಪ್ರವಾಸ ಹಾಗು ಉತ್ತಮ ಸಿಬ್ಬಂದಿಗಳನ್ನು ನಮ್ಮ ಸಂಸ್ಥೆ ಹೊಂದಿರುವುದರಿಂದ ಆ ಸಿಬ್ಬಂದಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸುವ ಸದುದ್ದೇಶದಿಂದ ಗಳಿಕೆ ರಜೆ ಹಾಗು ಗ್ರಾಚ್ಯುಟಿ ಪ್ರಾವದಾನದ ಕುರಿತು ಕಳೆದ ಸಾಮಾನ್ಯ ಸಭೆಯ ಅನುಮೋದನೆ ಪಡೆದು ಸಹಕಾರಿಯ ಹೆಚ್ಚಿನ ಲಾಭವನ್ನು ಸಿಬ್ಬಂದಿಗಳಿಗೆ ತಲುಪಿಸಲು ಕ್ರಮವಿಡಲಾಗಿದೆ ಮತ್ತು ಇತರೆ ಅವಶ್ಯಕತೆಗಳಿಗನುಗುಣವಾಗಿ ಸದಸ್ಯ ಸಹಕಾರಿಗಳಿಗೆ ಅಗತ್ಯ ಸೇವೆ ಒದಗಿಸುವುದು. ಸಾಲ ಪಡೆದು ಮೃತ ಪಟ್ಟ ಸದಸ್ಯರಿಗೆ ವಿಮೆ ಹಣದ ಮೂಲಕ ಮೃತರ ಕುಟುಂಬ ಸದಸ್ಯರನ್ನು ಋಣ ಮುಕ್ತರನ್ನಾಗಿಸಿದೆ ಎಂಬುದನ್ನು ತಿಳಿಸಲು ಸಂತೋಷವೆನಿಸುತ್ತದೆ.

ಸಹಕಾರದ ತತ್ವದಡಿ ರಾಜ್ಯ ಹಾಗು ದೇಶ ಕೊಡುವ ಎಲ್ಲಾ ಕರೆಗಳಿಗೂ ಒಗೊಟ್ಟು ನಮ್ಮ ಸದಸ್ಯರು. ಸಿಬ್ಬಂದಿ ವರ್ಗದವರು ಗುಣಾತ್ಮಕವಾಗಿ ಸ್ಪಂದಿಸುವ ಮೂಲಕ ಆಂದೋಲನಗಳಲ್ಲಿ ಪಾಲ್ಗೊಳ್ಳುತ್ತಾ ಬಂದ್ದಿದೇವೆ. ಹಾಗೆಯೇ ವಿವಿಧ ಶಾಖೆಗಳಿಂದ ನಡೆಸುತ್ತಿರುವ ಸಮಾಜ ಮುಖಿ ಕಾರ್ಯಕ್ರಮಗಳಾದ ವದನಕಲ್ ಜಾತ್ರೆಯಲ್ಲಿ ಸಾರ್ವಜನಿಕರಿಗೆ ಹಾಗೂ ರಾಸುಗಳಿಗೆ ನೀರಿನ ವ್ಯವಸ್ಥೆ ಮತ್ತು ಸ್ಥಳೀಯವಾಗಿ ಪ್ರಖ್ಯಾತಿಯಾಗಿರುವ ವಿವಿಧ ಆಸ್ಪತ್ರೆಗಳ ತಜ್ಞ ವೈದ್ಯ ತಂಡದೊಂದಿಗೆ ಎಲ್ಲಾ ರೀತಿಯ ಉಚಿತ ವೈದ್ಯಕೀಯ ತಪಾಸಣೆ ಶಿಬಿರಗಳು, ಕಣ್ಣಿನ ತಪಾಸಣೆ, ರಕ್ತದಾನ ಶಿಬಿರಗಳು ಯಶಸ್ವಿಯಾಗಿ

ನಡೆದಿದ್ದು ಸದರಿ ಶಾಖೆಗಳ ಶಾಖಾ ಸಮಿತಿ ಸದಸ್ಯರಿಗೂ ಹಾಗೂ ಸಿಬ್ಬಂದಿಗಳನ್ನು ಅಭಿನಂದಿಸುತ್ತಾ ಪ್ರತಿ ಶಾಖೆಗಳು ಗ್ರಾಹಕರ ಸಭೆಯ ದಿನ ಈ ರೀತಿಯ ಕಾಳಜಿಯುಳ್ಳ ಸಮಾಜಮುಖಿ ಚಟುವಟಿಕೆಗಳನ್ನು ನಡೆಸುವ ಮೂಲಕ ಈ ಪರಂಪರೆಯನ್ನು ಬೆಳೆಸಬೇಕು ಎಂದು ತಿಳಿಸುವ ಮೂಲಕ, ಈ ಸಭೆಯ ಗಮನಕ್ಕೆ ತರಲು ಹರ್ಷಿಸುತ್ತೇನೆ.

ರಾಜ್ಯ ಮಟ್ಟದ ಸಂಯುಕ್ತ ಸಹಕಾರಿಯ ನಿರ್ದೇಶಕನಾಗಿ ಸಹಕಾರ ಭಾರತಿಯ ರಾಷ್ಟ್ರೀಯ ಉಪಾಧ್ಯಕ್ಷನಾಗಿ ಸಹಕಾರಿ ಕ್ಷೇತ್ರವನ್ನು ಜನ ಸಾಮಾನ್ಯರು ಅಪೇಕ್ಷಿಸುವ ನೈಜ ಸಹಕಾರಿ ಚಳುವಳಿ ಆಗುವುದಕ್ಕಾಗಿ ಸಹಕಾರಿ ಕ್ಷೇತ್ರದಲ್ಲಿ ಸ್ವಾಯತ್ತತೆ, ಸ್ವಯಂ ನಿಯಂತ್ರಣಗಳ ಅಗತ್ಯದ ಹಿನ್ನಲೆಯಲ್ಲಿ ಪ್ರಸಕ್ತ ಸಾಲಿನ ಸೌಹಾರ್ದ ಕಾಯ್ದೆಯ ಸಮಗ್ರ ತಿದ್ದುಪಡಿ ವಿಷಯದಲ್ಲಿ ಮತ್ತು ಅನೇಕ ಸಂಯುಕ್ತ ಸಹಕಾರಿಯ ಕಾರ್ಯ ಚಟುವಟಿಕೆಗಳಲ್ಲಿ, ತರಬೇತಿ ಕಾರ್ಯಕ್ರಮಗಳಲ್ಲಿ, ಸರ್ಕಾರ ಮನ್ನಣೆಗಳಿಸುವ, ಪ್ರವಾಸ ಕೈಗೊಳ್ಳುವ ಹಾಗು ರಾಜ್ಯದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಆಗುತ್ತಿರುವ ಸಮಸ್ಯೆಯನ್ನು ಬಗೆಹರಿಸಲು ಮತ್ತು ಸಹಕಾರಿಕ್ಷೇತ್ರವನ್ನು ಸಂಘಟಿಸುವ ಅತ್ಯಂತ ಪವಿತ್ರ ಕರ್ತವ್ಯದಲ್ಲಿ ಸಮರ್ಪಕ ಹಾಗೂ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಹಾಗೆಯೇ ಕರ್ನಾಟಕ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಹಾಗು ಸಂಯುಕ್ತ ಸಹಕಾರಿಯು ದೇಶದಲ್ಲಿಯೇ ಒಂದು ಉತ್ತಮ ಕಾರ್ಪೋರೇಟ್ ಸಹಕಾರಿ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುವಂತಾಗಲು ಕ್ರಿಯಾಯೋಜನೆಯನ್ನು ರೂಪಿಸಿದ್ದು ಅದರಂತೆ ಸಂಯುಕ್ತ ಸಹಕಾರಿಯ ಪ್ರಧಾನ ಕಚೇರಿ ಹಾಗು ಪ್ರಾಂತೀಯ ಕಚೇರಿಗಳಿಗೆ ಸುಸಜ್ಜಿತವಾದ ಬಹುಮಹಡಿಕಟ್ಟಡ. ಹಾಗು ನಿವೇಶನ ಖರೀದಿ, ಸಂಯುಕ್ತ ಸಹಕಾರಿ ನೇತೃತ್ವದ ದಾವಾ ಪಂಚಾಯಿತಿ ನ್ಯಾಯಲಯ, ಸಂಚಾರಿ ನ್ಯಾಯ ಪೀಠಗಳು ಸಕ್ರಿಯವಾಗಿ ಕಾರ್ಯ ನಿರ್ವಹಿಸುವಂತೆ ಗಮನಿಸುವುದು, ಸೌಹಾರ್ದ ಸಹಕಾರಿಗಳಿಗೆ ಕಾಮನ್ ಸಾಫ್ಟವೇರ್, ಸುಸಜ್ಜಿತ ಉನ್ನತ ಮಟ್ಟದ ತರಬೇತಿಕೇಂದ್ರ ಹಾಗು ಅಂತರಾಷ್ಟ್ರೀಯ ಸಂಶೋಧನಕೇಂದ್ರದ ಸ್ಥಾಪನೆ ಹೀಗೆ ಪ್ರಗತಿಪರ ಕಾರ್ಯಗಳನ್ನು ಅನುಷ್ಠಾನಗೊಳಿಸಲು ಸೌಹಾರ್ದಯುತವಾಗಿ ಆಡಳಿತ ನಿರ್ವಹಿಸುವ ಮೂಲಕ ಆಡಳಿತದಲ್ಲಿ ಪಾರದರ್ಶಕತೆ, ಪ್ರಾಮಾಣಿಕತೆ ಮೂಡಿಸುವುದು ಮತ್ತು ರಾಜ್ಯಾದ್ಯಂತ ಪ್ರವಾಸದಿಂದ ಆದ ಉತ್ತಮ ಅನುಭವಗಳನ್ನು ನಮ್ಮ ಸಂಸ್ಥೆಯಲ್ಲಿ ಆಳವಡಿಸಿಕೊಳ್ಳುವ ಮೂಲಕ ಯಶಸ್ವಿಯಾಗಿ ಆಡಳಿತವನ್ನು ನಡೆಸುವುದಾಗಿ ತಿಳಿಸುತ್ತೇನೆ. ರಾಜ್ಯ ಹಾಗು ರಾಷ್ಟ್ರ ಮಟ್ಟದ ಈ ಜವಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಸಹಕರಿಸುತ್ತಿರುವ ಎಲ್ಲಾ ಆಡಳಿತ ಮಂಡಲಿ ಸದಸ್ಯರಿಗೂ ಹಾಗು ಸಿಬ್ಬಂದಿ ವರ್ಗದವರಿಗೂ ಅಭಿನಂದಿಸುತ್ತಾ ಮುಂದಿನ ದಿನಗಳಲ್ಲಿಯೂ ಸಹ ಇದೇ ರೀತಿಯ ಸಹಕಾರವನ್ನು ಆಪೇಕ್ಷಿಸುತ್ತೇನೆ.

ನಮ್ಮ ಈ ಸಂಸ್ಥೆಯ ಸುಧೀರ್ಘ ಪಯಣ ಹಾಗೂ ಗುಣಾತ್ಮಕ ಬೆಳವಣಿಗೆಗೆ ಮತ್ತು ಸಹಕಾರ ಕ್ಷೇತ್ರದ ಕಾನೂನು ತಿದ್ದುಪಡಿಗೆ ಬೆನ್ನೆಲುಬಾಗಿ ನಿಂತು ಸಹಕರಿಸಿದ ಕೇಂದ್ರ ಸರ್ಕಾರದ ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ, **ಶ್ರೀಯುತ ಡಿ.ಕೆ. ಶಿವಕುಮಾರ್ ರವರು,** ಮಾನ್ಯ ಮುಖ್ಯಮಂತ್ರಿಗಳು, **ಶ್ರೀಯುತ ಲಕ್ಷ್ಮಣ್ ಸವಧಿ ರವರು,** ಸಹಕಾರ ಸಚಿವರು, ಮಂತ್ರಿಮಂಡಲದ ಸದಸ್ಯರು, ಸಹಕಾರ ಇಲಾಖೆಯ ಎಲ್ಲಾ ಅಧಿಕಾರ ವರ್ಗದವರು, **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ** ಮಹಮಂಡಳಿಯ ಆಡಳಿತ ಮತ್ತು ಸಿಬ್ಬಂದಿವರ್ಗದವರಿಗೂ, 441 ನ್ಯಾಯಲಯ, SARFAESI ತಂಡ ಮತ್ತು ಶಿವಶಂಕರ್ ಸುಪ್ರೀಂ ಎನ್‌ಫೋರ್ಸ್‌ಮೆಂಟ್ ರಾಜ್ಯದ ಎಲ್ಲಾ ಒಕ್ಕೂಟಗಳ ಅಧ್ಯಕ್ಷರು ಸದಸ್ಯರು, ಕಾನೂನು ಸಲಹೆಗಾರರು, ಮೌಲ್ಯಮಾಪಕರು, ರಾಷ್ಟ್ರೀಕೃತ ಬ್ಯಾಂಕುಗಳಿಂದ ನಮ್ಮ ಸಂಸ್ಥೆಯ ಆಡಳಿತ ಮಂಡಳಿ ಶಾಖಾ ಸಮಿತಿಗಳು ಮತ್ತು ಸಿಬ್ಬಂಧಿ

ಸಬ್ಕೆ ಸಾಥ್, ಸಬ್ಕೆ ವಿಶ್ವಾಸ್, ಸಬ್ಕೆ ವಿಕಾಸ್ ಎಂಬ ಮೋದಿ ರವರ ಮಾತಿನಂತೆ ನಾವು ಮಾಡುವ ಯಾವುದೇ ಕೆಲಸದಲ್ಲಿ ಕಠಿಣ ಪರಿಶ್ರಮವಿದ್ದು ಗುರಿಯೆಡೆಗೆ ಗಮನವಿಟ್ಟು ಶ್ರಮಿಸಿದರೆ ಅದಕ್ಕೆ ತಕ್ಕ ಪ್ರತಿ ಫಲ ದೊರೆಯುತ್ತದೆ. ಆದ ಕಾರಣ ಸಿಬ್ಬಂದಿಗಳು ಸಹಕಾರಿಯ ಏಳಿಗೆಗಾಗಿ ಕಠಿಣ ಪರಿಶ್ರಮದಿಂದ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಬೇಕೆಂದು ಸಿಬ್ಬಂದಿಗೆ ತಿಳಿಸುತ್ತಾ, ಈ ಮೇಲಿನ ಎಲ್ಲಾ ಯೋಜನೆಗಳ ಜೊತೆಗೆ ಈ ವರ್ಷದಲ್ಲಿ ಯೋಜಿಸಿರುವ ಉಪವಿಧಿಗಳ ತಿದ್ದುಪಡಿ, ಸ್ವಂತ ಕಟ್ಟಡಗಳ ನಿರ್ಮಾಣ, ಸ್ವಂತ ನಿವೇಶನಗಳ ಖರೀದಿ ಹಾಗು ನೂತನ ಶಾಖೆಗಳನ್ನು ತೆರೆಯುವ ಕಾರ್ಯ ಯೋಜನೆಯಲ್ಲಿಗೆ ತಮ್ಮೆಲ್ಲರ ಪೂರ್ಣ ಸಹಕಾರವನ್ನು ಕೋರುತ್ತ ಈ ಎಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸಲು ಹಾಗು ಸಮರ್ಪಕವಾಗಿ ನಿರ್ವಹಿಸಲು ಪ್ರೇರಣೆಕೊಟ್ಟಂತಹ ಸಹಕಾರಿಯ ಎಲ್ಲಾ ಸದಸ್ಯರುಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತಾ ನಮ್ಮ ಸಹಕಾರಿಯ 2025–26 ಸಾಲಿನ ವಾರ್ಷಿಕ ವರದಿಯನ್ನು ತಮ್ಮ ಮುಂದೆ ಮಂಡಿಸುತ್ತಿದ್ದೇನೆ.

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಸಂಸ್ಥಾಪಕ ಅಧ್ಯಕ್ಷರು

2025 – 26ನೇ ಸಾಲಿನ ಸಹಕಾರಿಯ ವಾರ್ಷಿಕ ವರದಿ

ಸಹಕಾರಿಯ 24ನೇ ಸಾಮಾನ್ಯ ಸಭೆಗೆ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ತಮ್ಮೆಲ್ಲರನ್ನು ಮತ್ತೊಮ್ಮೆ ಹೃದಯಪೂರ್ವಕವಾಗಿ ಸ್ವಾಗತಿಸುತ್ತಾ ಈ ನಿಮ್ಮ ಸಹಕಾರಿ, ಸದರಿ ವರ್ಷದಲ್ಲಿ ತನ್ನ ಯಶಸ್ವಿ ಓಟಕ್ಕೆ ಹಿನ್ನಡೆಯಾಗದ ರೀತಿಯಲ್ಲಿ ಯಶಸ್ಸುಗಳಿಸಿ ಮುನ್ನಡೆಯುತ್ತಿದೆ. ಸಹಕಾರಿಯ ಅಭಿವೃದ್ಧಿಯಲ್ಲಿ ಅನೇಕರು ಅನೇಕ ರೀತಿಯಲ್ಲಿ ಶ್ರಮಿಸಿದ್ದಾರೆ ಜೊತೆಗೆ ಹಲವರು ಹಲವು ವಿಧಗಳಲ್ಲಿ ಸಹಕಾರಿಯ ಪ್ರಯೋಜನವನ್ನು ಪಡೆದಿದ್ದಾರೆ ಸಂತೋಷದ ಸಂಗತಿಯೆಂದರೆ ಸಹಕಾರಿಯಿಂದ ಆರ್ಥಿಕ ಸಹಾಯ ಪಡೆದ ಅನೇಕ ಸದಸ್ಯರು ಇಂದು ಆರ್ಥಿಕವಾಗಿ ಸಫಲರಾಗಿದ್ದಾರೆ. ರಾಜ್ಯದ 12 ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುವ ಮೂಲಕ ಸದಸ್ಯ ಸ್ನೇಹಿ ಸಂಸ್ಥೆಯೆಂದು ಹೆಸರು ಪಡೆಯುವ ಮೂಲಕ ಕಾರ್ಯ ನಿರ್ವಹಿಸಿದ್ದು ಮುಂದಿನ ಸಾಲಿನಲ್ಲಿ ಹೆಚ್ಚಿನ ಪ್ರಗತಿಯ ನಿರೀಕ್ಷೆಯಲ್ಲಿದ್ದು **"ತಾನು ಎಲ್ಲರಿಗಾಗಿ ಎಲ್ಲರು ತನಗಾಗಿ"** ಎನ್ನುವ ಸಹಕಾರಿಯ ಮೂಲ ಉದ್ದೇಶವನ್ನು ಸಾಕಾರಗೊಳಿಸಲು ತಮ್ಮ ಸಹಕಾರವನ್ನು ಬಯಸುತ್ತೇವೆ.

ಈ ನಮ್ಮ ಸಹಕಾರಿಯು ಠೇವಣಿ, ಸಾಲ ಮತ್ತು ಮುಂಗಡಗಳಲ್ಲದೆ ಸದಸ್ಯರಿಗೆ ಅನುಕೂಲವಾಗುವಂತೆ ಇ–ಸ್ಟಾಂಪ್, **INSURANCE REGULATORY & DEVELOPMENT AUTHORITY OF INDIA** ನಿಂದ ಸಹಕಾರಿಯ ಹೆಸರಿಗೆ ಕಾರ್ಪೊರೇಟ್ ಏಜೆನ್ಸಿಯನ್ನು ಪಡೆಯುವ ಮೂಲಕ ಯಾವುದೇ ಮಧ್ಯವರ್ತಿಗಳಿಲ್ಲದೆ ನೇರವಾಗಿ ಸದಸ್ಯರಿಗೆ ಅವಶ್ಯವಿರುವ ವಾಹನ ವಿಮೆ, ಆರೋಗ್ಯ ವಿಮೆ, ಜೀವ ವಿಮೆಯನ್ನು ಮಾಡಿಕೊಡಲಾಗುವುದು. ಪಾನ್ ಕಾರ್ಡ್, ಪಾಸ್ ಪೋರ್ಟ್, ಲಾಕರ್ ಸೌಲಭ್ಯ ಹಾಗೂ ರಾಷ್ಟ್ರೀಯ ಬ್ಯಾಂಕುಗಳ ಸಹಯೋಗದಿಂದ ಆರ್.ಟಿ.ಜಿ.ಎಸ್, ಎನ್.ಇ.ಎಫ್.ಟಿ, ಡಿ.ಡಿ, ಸೌಲಭ್ಯಗಳನ್ನು ಒದಗಿಸುವ ಮುಖಾಂತರ ಸದಸ್ಯರ ಅಗತ್ಯಗಳನ್ನು ಪೂರೈಸುವುದರೊಂದಿಗೆ ತನ್ನ ಈ ವಿಶಿಷ್ಟ ಸೇವೆಗಳಿಂದ ನಮ್ಮ ಸಹಕಾರಿ, ಇಡೀ ಸಹಕಾರಿ ಕ್ಷೇತ್ರದಲ್ಲೇ ಅತ್ಯುತ್ತಮ ಸಹಕಾರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಕಳೆದ 24 ವರ್ಷಗಳ ಅವಧಿಯಲ್ಲಿ ಕರ್ನಾಟಕ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ತನ್ನದೆ ಆದ ಪ್ರತ್ಯೇಕತೆಯನ್ನು ಮೂಡಿಸಿದ ಈ ಸಹಕಾರಿಯ ಆರ್ಥಿಕ ವರ್ಷದ ವಾರ್ಷಿಕ ವರದಿಯ ಸಿಂಹಾವಲೋಕನವನ್ನು ಇಂದು ನಾವು ಮಾಡಬೇಕಾಗಿದೆ ಇದಕ್ಕೆ ತಮ್ಮೆಲ್ಲರಿಗು ತುಂಬು ಹೃದಯದ ಸ್ವಾಗತವನ್ನು ಬಯಸುತ್ತಾ 2025–26ನೇ ಸಾಲಿನ ವಾರ್ಷಿಕ ವರದಿಯನ್ನು ಆಡಳಿತ ಮಂಡಳಿಯ ಪರವಾಗಿ ತಮ್ಮ ಮುಂದೆ ಮಂಡಿಸಲು ತುಂಬಾ ಸಂತೋಷವೆನಿಸುತ್ತದೆ.


•ಸದಸ್ಯತ್ವ :

ಸಹಕಾರಿಯ ವರ್ಷದ ಆರಂಭದಲ್ಲಿ ಇದ್ದ ಸದಸ್ಯರ ಸಂಖ್ಯೆ 17,141 ಪ್ರಸಕ್ತ ಸಹಕಾರಿಯ ಸದಸ್ಯರ ಸಂಖ್ಯೆ ವರ್ಷಾಂತ್ಯಕ್ಕೆ 17,270 ಆಗಿರುತ್ತದೆ.

ಪ್ರಸ್ತುತ ಸಾಲು ಪ್ರಾರಂಭದಲ್ಲಿ	17,141
ಪ್ರಸ್ತುತ ಸಾಲಿನಲ್ಲಿ ಸೇರ್ಪಡೆ	1,082
ಪ್ರಸ್ತುತ ಸಾಲಿನಲ್ಲಿ ಹಿಂಪಡೆದವರು	958
ವರ್ಷದ ಅಂತ್ಯಕ್ಕೆ ಸದಸ್ಯರ ಸಂಖ್ಯೆ	17,270

• ಗೌರ್ವನಿಂಗ್ ಕೌನ್ಸಿಲ್

ನಮ್ಮ ಸಹಕಾರಿಯ ಮಂಡಳಿ ರಚನೆ ಎಲ್ಲಾ ವ್ಯವಹಾರಗಳನ್ನು ಪರಿವೀಕ್ಷಿಸಿಸಲು **ಸಿ.ಎನ್ ನಾಗೇಶ್, ಬಿ.ಹೆಚ್ ರಾಮಲಿಂಗಾ ರೆಡ್ಡಿ, ಬಿ ಪಿ ಪಾಲಯ್ಯ, ರೆಡ್ಡಪ್ಪ ರೆಡ್ಡಿ, ಬಿ ಹೆಚ್ ಜಯರಾಮ ರೆಡ್ಡಿ** ರವರನ್ನು ಒಳಗೊಂಡ ಸಮಿತಿಯನ್ನು ರಚಿಸಿಕೊಂಡಿದೆ.




● ಷೇರು ಬಂಡವಾಳ


ಆರ್ಥಿಕ ವರ್ಷದ ಆರಂಭದಲ್ಲಿ ಇದ್ದ ಷೇರು ಬಂಡವಾಳ ರೂ. **3,39,33,000**/– ಆರ್ಥಿಕ ವರ್ಷದ ಅಂತ್ಯದಲ್ಲಿ ರೂ. **3,45,91,000**/– ತಲುಪಿತು. ವರದಿಯ ವರ್ಷದಲ್ಲಿ ಷೇರು ಬಂಡವಾಳದಲ್ಲಿ ನಿವ್ವಳ ರೂ. **6,58,000**/– ಲಕ್ಷ ಏರಿಕೆಯಾಗಿರುತ್ತದೆ

ಸಾಲ ಪ್ರಾರಂಭದಲ್ಲಿದ್ದ ಷೇರು ಧನ	**3,39,33,000**
ಪ್ರಸ್ತುತ ಸಾಲಿನಲ್ಲಿ ತೊಡಗಿಸಿದ್ದು	**16,71,000**
ಪ್ರಸ್ತುತ ಸಾಲಿನಲ್ಲಿ ಹಿಂತಿರುಗಿಸಿದ್ದು	**10,13,000**
ವರ್ಷದ ಅಂತ್ಯಕ್ಕೆ ಷೇರು ಬಂಡವಾಳ	**3,45,91,000**

● ಠೇವಣಿಗಳು :

ಕಳೆದ ವರ್ಷದ ಆರಂಭದಲ್ಲಿ ರೂ. **271.21** ಕೋಟಿ ಇದ್ದ ಠೇವಣಿ 2025–26ರ ಸಾಲಿನಲ್ಲಿ ಉತ್ತಮ ಪ್ರಗತಿಯನ್ನು ಹೊಂದುವ ಮೂಲಕ ಈ ವರ್ಷದ ಕೊನೆಯಲ್ಲಿ ರೂ. **325.44** ಕೋಟಿಗೆ ಏರಿಕೆಯಾಗಿದೆ.





● ಸಾಲ ಹಾಗು ಮುಂಗಡಗಳು :


ಹಲವಾರು ರಾಷ್ಟ್ರೀಕೃತ ಬ್ಯಾಂಕುಗಳು ಹಾಗೂ ವಾಣಿಜ್ಯ ಬ್ಯಾಂಕುಗಳ ತೀವ್ರ ಸ್ಪರ್ಧೆ ನಡುವೆಯು ಪ್ರಸಕ್ತ ಸಾಲಿನಲ್ಲಿ ನಮ್ಮ ಸಹಕಾರಿಯು ಸಾಲ ನೀಡಿಕೆಯಲ್ಲಿ ಪ್ರಗತಿ ಸಾಧಿಸಿ, ಪ್ರಸಕ್ತ ಸಾಲಿನಲ್ಲಿ ಸಹಾಕಾರಿಯ ಸಾಲ ವಿತರಣೆಯಲ್ಲಿ ಉದ್ದೇಶಿತ ಗುರಿ ತಲುಪಿದ್ದು ಹಲವು ಯೋಜನೆಗಳ ಮೂಲಕ ಪ್ರಗತಿಯನ್ನು ಸಾದಿಸಲು ಸಾಧ್ಯವಾಯಿತು ವರುಷದ ಆರಂಭದಲ್ಲಿ ನೀಡಿದ ಒಟ್ಟು ಸಾಲ ರೂ. **207.42** ಕೋಟಿ ಈ ವರುಷದ ಕೊನೆಯಲ್ಲಿ ರೂ. **238.94** ಕೋಟಿ ತಲುಪಿರುತ್ತದೆ.

● ಸಾಲ ಸಮಿತಿಗಳು

ನಮ್ಮ ಸಹಕಾರಿಯು ಹನ್ನೊಂದು ತಂಡಗಳೊಳಗೊಂಡ ಸಮಿತಿ ರಚಿಸಿದ್ದು ಎಲ್ಲಾ ಸಾಲಗಳನ್ನು ಸಿಬ್ಬಂದಿ, ಶಾಖಾಸಮಿತಿ, ಆಡಳಿತ ಮಂಡಳಿ ಅಭಿವೃದ್ಧಿ ತಂಡ, ಸಾಲ ಸಮಿತಿಗಳು ಸೇರಿ ಸಾಲವನ್ನು ನೀಡಲು ತಿರ್ಮಾನಿಸುವುದು

- **ಅನುತ್ಪಾದಕ ಆಸ್ತಿ:**

ಯಾವುದೇ ಸಹಕಾರಿಯ ಆರೋಗ್ಯ ಅರಿಯುವ ಮಾನದಂಡ ಅದರ ಅನುತ್ಪಾದಕ ಆಸ್ತಿಗಳ ಪ್ರಮಾಣದಿಂದ ಆರಿಯಬಹುದು.ನಮ್ಮ ಸಹಕಾರಿಯ ಒಟ್ಟು ಸಾಲ **238.94** ಕೋಟಿ ರೂಗಳಿಗೆ ಈ ವರ್ಷ ನಮ್ಮ ಸಹಕಾರಿಯ ಎನ್.ಪಿ.ಎ ಪ್ರಮಾಣ **0.17%** ಆಗಿರುತ್ತೆದೆ.



- **ನಿವ್ವಳ ಲಾಭ:**

ಕಳೆದ ವರ್ಷ ರೂ. **5.98** ಕೋಟಿ ನಿವ್ವಳ ಲಾಭಗಳಿಸಿದ್ದ ಸಹಕಾರಿ, ಈ ಸಾಲಿನಲ್ಲಿಯೂ ಸಹ ವಸೂಲಾತಿಯನ್ನು ಉತ್ತಮ ರೀತಿಯಲ್ಲಿ ಮಾಡಿರುವುದರಿಂದ ಪ್ರಸಕ್ತ ಸಾಲಿನಲ್ಲಿ ರೂ. **6.48** ಕೋಟಿಗಳ ನಿವ್ವಳ ಲಾಭಗಳಿಸಿದೆ.

- **ಆಡಳಿತ ಮಂಡಳಿ ಸಭೆಗಳು :**

ಸಹಕಾರಿಯು 2025–26ನೇ ಸಾಲಿನಲ್ಲಿ ನಿರ್ದೇಶಕ ಮಂಡಳಿ ಭೌತಿಕಸಭೆ 6 ಮತ್ತು ಆನ್‌ಲೈನ್ ಸಭೆ 6 ಒಟ್ಟು 12 ಸಭೆಗಳನ್ನು ನಡೆಸಿದ್ದು ಸಹಕಾರಿಯ ಒಟ್ಟು ಬೆಳವಣಿಗೆಯ ಬಗ್ಗೆ ಕೂಲಂಕುಶವಾಗಿ ಚರ್ಚಿಸಿ ಸಹಕಾರಿಯು ಉನ್ನತ ಮಟ್ಟದ ಸೇವೆಗಳನ್ನು ಸದಸ್ಯರಿಗೆ ಒದಗಿಸುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳುತ್ತಿದೆ.ಈ ಸಭೆಗಳ ವಿಶೇಷವೆಂದರೆ ಆಡಳಿತ ಮಂಡಳಿಯ ಸದಸ್ಯರಲ್ಲದೆ ಎಲ್ಲಾ ಶಾಖೆಗಳ ವ್ಯವಸ್ಥಾಪಕರಿಂದ ಆಯಾ ಶಾಖಾವಾರು ಪ್ರಗತಿ ಪರಿಶೀಲನೆ ನಡೆಸಲಾಗುತ್ತಿದೆ. ಈ ಸಭೆಯು ಬೆಳಿಗ್ಗೆ 10.00 ರಿಂದ ಸಂಜೆ 6.00 ರವರೆಗೆ ಆಡಳಿತ ಮಂಡಳಿಯ ಸಭೆ ಸೇರಿ ಬೆಳಿಗ್ಗೆಯಿಂದ ಶಾಖಾ ವ್ಯವಸ್ಥಾಪಕರೊಂದಿಗೆ ಚರ್ಚಿಸಿದ ವಿಷಯಗಳ ಬಗ್ಗೆ ಸ್ಥಳದಲ್ಲೇ ಸೂಕ್ತ ತೀರ್ಮಾನಗಳನ್ನು ಕೈಗೊಂಡು ಎಲ್ಲಾ ವ್ಯವಸ್ಥಾಪಕರಿಗೂ ಆಡಳಿತ ಮಂಡಳಿ ಸಭೆ ಕೈಗೊಂಡ ಸಲಹೆ ಮತ್ತು ತೀರ್ಮಾನಗಳನ್ನು ತಿಳಿಸುವ ವ್ಯವಸ್ಥೆ ನಮ್ಮಲ್ಲಿದೆ.

- **ಭದ್ರತಾ ಕಪಾಟು / ಸೇಫ್ ಡಿಪಾಸಿಟ್ ಲಾಕರ್ ಸೌಲಭ್ಯ :**

ಸಹಕಾರಿಯ ಆಡಳಿತ ಕಛೇರಿಯೊನ್ನಳಗೊಂಡ **ಡಾ। ಶಿವರಾಮಕಾರಂತನಗರ ಶಾಖೆ, ಹೆಬ್ಬಗೋಡಿ, ಲಿಂಗದಹಳ್ಳಿ, ಕೊರಟಗೆರೆ ತುಮಕೂರು 4ನೇ ಶಾಖೆ ಹಾಗೂ ಶಿರಾ** ಶಾಖೆಗಳಲ್ಲಿ ಸದಸ್ಯರ ಅನುಕೂಲಕ್ಕಾಗಿ ವಿವಿಧ ಗಾತ್ರದ ಭದ್ರತಾ ಕಪಾಟುಗಳನ್ನು ಒದಗಿಸಲಾಗಿದ್ದು, ಸಹಕಾರಿಯ ಸದಸ್ಯರು ಈ ಸೌಲಭ್ಯದ ಸದುಪಯೋಗಪಡಿಸಿಕೊಳ್ಳಲು ಕೋರುತ್ತೇವೆ.

- **ಶಾಖಾ ಸಮಿತಿ:**

ನಮ್ಮ ಸಹಕಾರಿಯು 33 ಶಾಖೆಗಳನ್ನು ಹೊಂದಿದ್ದು ಪ್ರತಿ ಶಾಖೆಗಳಲ್ಲಿ ಪಾರದರ್ಶಕತೆ ಹಾಗೂ ತ್ವರಿತಗತಿಯ ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ ಪ್ರತಿಯೊಂದು ಶಾಖಾ ಮಟ್ಟದಲ್ಲಿ ಶಾಖಾ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಯಲ್ಲಿ 5 ರಿಂದ 10 ಜನ ಸದಸ್ಯರನ್ನೊಳಗೊಂಡಿರುವ ವ್ಯವಸ್ಥೆ ಇದ್ದು ಸದರಿ ಸಮಿತಿಯ 250ಕ್ಕಿಂತ ಹೆಚ್ಚು ಸದಸ್ಯರು ಆಯಾ ಶಾಖೆಗಳಲ್ಲಿ ಪ್ರತಿ ಹದಿನೈದು ದಿನಕೊಮ್ಮೆ ನಿಗದಿಪಡಿಸಿದ ದಿನದಂದು ಸಭೆ ಸೇರಿ ಸಾಲ ವಿತರಣೆ, ಠೇವಣಿ ಸಂಗ್ರಹಣೆ ಸಾಲ ವಸೂಲಾತಿ, ಆಂತರಿಕ ಲೆಕ್ಕ ಪರಿಶೋಧನೆ ಹಾಗೂ ಶಾಖೆಯು ಅಭಿವೃದ್ಧಿ ಪಥದಲ್ಲಿ ನಡೆಯಲು ಅವಶ್ಯಕವಾದ ಅಂಶಗಳ ಬಗ್ಗೆ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ಕೈಗೊಳ್ಳುವ ವ್ಯವಸ್ಥೆ ಇದೆ.

• **ಅಭಿವೃದ್ಧಿ ಸಮಿತಿ:**

ಸಹಕಾರಿಯಲ್ಲಿರುವ ಒಟ್ಟು ಶಾಖೆಗಳನ್ನು ಹನ್ನೊಂದು ಅಭಿವೃದ್ಧಿ ಸಮಿತಿಗಳಾಗಿ ವಿಂಗಡಿಸಿ ಪ್ರತಿ ಶಾಖೆಗಳ ಬೆಳವಣಿಗೆ ಹಾಗೂ ಗುಣಮಟ್ಟದ ನಿರ್ವಹಣೆಗಾಗಿ ಕಾರ್ಯ ನಿರ್ವಹಿಸುತ್ತಿದೆ. ಹಾಗೂ ಶಾಖೆಗಳಲ್ಲಿ ಸಿಬ್ಬಂದಿ ಹಾಗೂ ಬಿ.ಸಿ.ಎಂ. ಸದಸ್ಯರು ತಮ್ಮ ಮಿತಿಯಲ್ಲಿ ವಿತರಿಸುವ ಎಲ್ಲಾ ಸಾಲಗಳ ಮೇಲೂ ಗಮನ ಹರಿಸಿ ಸಾಲದ ವಿತರಣೆ ಮಾಡುವುದು ಹಾಗೂ ಹತ್ತು ಲಕ್ಷಕ್ಕೂ ಮೇಲ್ಪಟ್ಟ ಸಾಲಗಳನ್ನು ಆಡಳಿತ ಮಂಡಳಿ ನಿರ್ದೇಶಕರಿಂದ ರೂಪುಗೊಂಡಿರುವ ಅಭಿವೃದ್ಧಿ ಸಮಿತಿಗೆ ಶಿಫಾರಸ್ಸು ಮಾಡುವ ಕಾರ್ಯವನ್ನು ನಿರ್ವಹಿಸುತ್ತದೆ ಈ ವ್ಯವಸ್ಥೆಯಿಂದಾಗಿ ಗುಣಾತ್ಮಕ ಸಾಲಗಳನ್ನು ಸದಸ್ಯರಿಗೆ ತ್ವರಿತವಾಗಿ ಪಾರದರ್ಶಕತೆಯಿಂದ ವಿತರಿಸಲು ಸಹಾಯವಾಗುತ್ತಿದೆ.

• **ಸಿಬ್ಬಂದಿ ನೇಮಕಾತಿ ಸಮಿತಿ:**

ನಮ್ಮ ಸಹಕಾರಿಯು 33 ಶಾಖೆಗಳನ್ನು ಹೊಂದಿ ವೇಗವಾಗಿ ಬೆಳೆಯುತ್ತಿರುವುದರಿಂದ ಸಹಕಾರಿಯ ದೈನಂದಿನ ವಹಿವಾಟಿಗೆ ತೊಂದರೆಯಾಗದಂತೆ ಅವಶ್ಯವಿರುವ ಶಾಖೆಗಳಿಗೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವ ಸಲುವಾಗಿ ನೇಮಕಾತಿ ಸಮಿತಿಯನ್ನು ರಚಿಸಿದ್ದು ಸದರಿ ಸಮಿತಿಯಲ್ಲಿ ಸಹಕಾರಿಯ ಅಧ್ಯಕ್ಷರು, ಒಬ್ಬರು ಆಡಳಿತ ಮಂಡಳಿಯ ನಿರ್ದೇಶಕರು, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಒಬ್ಬರು ಬಾಹ್ಯ ತಜ್ಞರು ಹಾಗು ಸಂಯುಕ್ತ ಸಹಕಾರಿ ಒಬ್ಬ ಪ್ರತಿನಿಧಿಯನ್ನೊಳಗೊಂಡ 5ಜನ ಭಾಗವಹಿಸಲಿದ್ದು, ಆಯಾ ಅವಶ್ಯ ಹುದ್ದೆಗಳಿಗನುಗುಣವಾಗಿ ಲಿಖಿತ ಪರೀಕ್ಷೆ ಹಾಗು ಮೌಖಿಕ ಸಂದರ್ಶನ ನಡೆಸಿ ಒಳ್ಳೆಯ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಈ ಸಿಬ್ಬಂದಿಗಳ ನೇಮಕಾತಿಯಲ್ಲೂ ಯಾವುದೇ ರೀತಿಯ ಒತ್ತಡವಿಲ್ಲದೆ ಪಾರದರ್ಶಕತೆಯಿಂದ ಆಯ್ಕೆ ಮಾಡುವ ವ್ಯವಸ್ಥೆಯನ್ನು ಒಳಗೊಂಡಿದೆ.

• **ವ್ಯವಸ್ಥಾಪಕರ ಸಭೆಗಳು :**

ಪ್ರತಿ ತಿಂಗಳಿಗೆ ನಾಲ್ಕು ಬಾರಿ ಅಧ್ಯಕ್ಷರು, ನಿರ್ದೇಶಕರು, ಕಾರ್ಯನಿರ್ವಹಣಾ ನಿರ್ದೇಶಕರು ಮತ್ತು, ಶಾಖಾ ಉಸ್ತುವಾರಿ ಸಮಿತಿ, ಶಾಖಾ ಸಿಬ್ಬಂದಿ ಸಮಿತಿ ಮತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ, ಸಮ್ಮುಖದಲ್ಲಿ ಎಲ್ಲಾ ಶಾಖೆಗಳ ವ್ಯವಸ್ಥಾಪಕರುಗಳು ಸಭೆ ಸೇರಿ ಆಯಾ ತಿಂಗಳ ಪ್ರಗತಿ ಪರಿಶೀಲನೆಯನ್ನು ಮಾಡಿ ಶಾಖೆಗಳ ಆಗು ಹೋಗುಗಳ, ವಸೂಲಾತಿ ಮತ್ತು ಶಾಖಾವಾರು ಅಭಿವೃದ್ಧಿಯ ಬಗ್ಗೆ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ಕೈಗೊಳ್ಳುವ ವ್ಯವಸ್ಥೆ ಇರುತ್ತದೆ.

• **ಕಾರ್ಯನಿರ್ವಹಣಾ ನಿರ್ದೇಶಕರು:**

ನಮ್ಮ ಸಹಕಾರಿಯ ಶಾಖೆಗಳಲ್ಲಿ ಪಾರದರ್ಶಕ ಹಾಗೂ ಉತ್ತಮ ಬೆಳವಣಿಗೆಗಾಗಿ ಕಾರ್ಯನಿರ್ವಹಣಾ ನಿರ್ದೇಶಕರುಗಳನ್ನು ನೇಮಿಸಿದ್ದು ಸದರಿಯವರು ಸಹಕಾರಿಯ ಯಾವುದೇ ಶಾಖೆಗೆ ಯಾವುದೇ ಸಂದರ್ಭದಲ್ಲಿ ಭೇಟಿ ನೀಡಿ ಶಾಖೆಗಳಲ್ಲಿನ ನ್ಯೂನತೆಗಳನ್ನು ಪರಿಶೀಲಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಸ್ಥಳದಲ್ಲೇ ಸೂಕ್ತ ಸಲಹೆ ನೀಡುವ ವ್ಯವಸ್ಥೆ ಇದ್ದುದರಿಂದಾಗಿ ಎಲ್ಲಾ ಶಾಖೆಗಳು ಅಭಿವೃದ್ಧಿ ಪಥದಲ್ಲಿ ಸಾಗುವ ನಿಟ್ಟಿನಲ್ಲಿ ಇವರ ಪಾತ್ರ ಮಹತ್ವದ್ದಾಗಿರುತ್ತದೆ.

• **ಕಾನೂನು ಸಲಹೆಗಾರರ ಸಮಿತಿ:**

ಈಗಾಗಲೇ ನೇಮಿಸಿಕೊಂಡಿರುವ ಎಲ್ಲಾ ಕಾನೂನು ಸಲಹೆಗಾರರನ್ನು ಒಳಗೊಂಡಂತೆ ಈ ಸಮಿತಿ ರಚಿಸಲಾಗಿದೆ ಈ ಸಮಿತಿಯು ಸಹಕಾರಿಯಲ್ಲಿ ನೀಡುತ್ತಿರುವ ಸ್ಥಿರಾಸ್ತಿ ಸಾಲಗಳಿಗೆ ಕಾನೂನು ಸಲಹೆಗಳನ್ನು ನೀಡುತ್ತದೆ. ಯಾವುದೇ ತರಹದ ಕಾನೂನಿಗೆ ಸಂಬಂಧಪಟ್ಟ ವಿಷಯಗಳನ್ನು ತಿಳಿಸಿ ಕೊಡುತ್ತದೆ.ಇದರಿಂದ ಸಹಕಾರಿಯು ಯವುದೇ ರೀತಿಯ ಕಾನೂನಿಗೆ ಸಂಬಂಧಪಟ್ಟ ತೊಂದರೆಯಲ್ಲಿ ಸಿಲುಕದಂತೆ ಕಾರ್ಯನಿರ್ವಹಿಸುವಲ್ಲಿ ಈ ಸಮಿತಿಯು ಪ್ರಮುಖ ಪಾತ್ರವಹಿಸಿರುತ್ತದೆ ಹಾಗೂ ಪ್ರತಿ ಶಾಖೆಗೆ ಇಬ್ಬರು ಕಾನೂನು ಸಲಹೆಗಾರರನ್ನು ನೇಮಿಸಿರುವುದು.

- **ಪ್ರಧಾನ ಕಛೇರಿಯಲ್ಲಿ 4 ವಿಭಾಗಗಳ ವಿಂಗಡನೆ (4 ZONE)**

ನಮ್ಮ ಸಂಸ್ಥೆಯ ನಿರ್ವಹಣೆಯಲ್ಲಿ ನೂತನ ಹಾಗೂ ಗುಣಾತ್ಮಕ ಲೆಕ್ಕಗಳ ಪರಿವೀಕ್ಷಣೆ ಶಾಖೆಗಳ ನಿರ್ವಹಣೆ ಹಾಗೂ ಶಿಸ್ತು, ಪಾರದರ್ಶಕತೆಯನ್ನು ಹೆಚ್ಚಿಸಲು 33 ಶಾಖೆಗಳನ್ನು ನಾಲ್ಕು ಝೋನ್‌ಗಳಾಗಿ ವಿಂಗಡಿಸಿ ಪ್ರತಿಯೊಂದು ವಿಭಾಗಕ್ಕೂ ಒಬ್ಬ ಹಿರಿಯ ಆಡಳಿತಗಾರರನ್ನು ನೇಮಿಸಲಾಗಿದೆ. ಸಾಲಗಳು ಮತ್ತು ವಸೂಲಾತಿಗಳು (LOANS & RECOVERY DEPARTMENT), ಠೇವಣಿಗಳು ಮತ್ತು ಇತರೆ ಚಟುವಟಿಕೆ (DEPOSIT & OTHER ACTIVITIES), ಲೆಕ್ಕ ಪತ್ರಗಳು ಹಾಗೂ ವ್ಯವಹಾರ (ACCOUNTS DEPARTMENT) ವಿಭಾಗಗಳಾಗಿ ವಿಂಗಡಿಸಲಾಗಿದೆ.

- **ಸಿ.ಇ.ಓ/ಇ. ಓ/ ಬಿ. ಎಮ್./ಇಂಟರ್ನಲ್ ಆಡಿಟರ್**

ಸಹಕಾರಿಯ ಆಡಳಿತವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ನಡೆಸುವ ಉದ್ದೇಶದಿಂದ ಪ್ರಧಾನ ಕಛೇರಿಯ ಆಡಳಿತದಲ್ಲಿ ಸಿ.ಇ.ಓ. ಮತ್ತು ಇ.ಓ ರವರುಗಳು ಪಾಲ್ಗೊಂಡಿದ್ದು, ಸಿ.ಇ.ಓ ರವರು ತನ್ನ ಶಾಖೆಯ ವ್ಯವಸ್ಥಾಪನೆಯನ್ನು ನಡೆಸುವುದಲ್ಲದೆ ತನ್ನ ಅನುಭವದ ಮೇರೆಗೆ ಅವರಿಗೆ ಎಲ್ಲಾ ಶಾಖೆಗಳ ಎಲ್ಲಾ ದೈನಂದಿನ ಕೆಲಸಗಳಲ್ಲಿ ಆಯಾ ವ್ಯವಸ್ಥಾಪಕರಿಗೆ ಮಾರ್ಗದರ್ಶಕರಾಗಿರುತ್ತಾರೆ. ವ್ಯವಸ್ಥಾಪಕರು (ಬಿ.ಎಮ್) ತನ್ನ ಶಾಖೆಯ ಸರ್ವತೋಮುಖ ಅಭಿವೃದ್ಧಿಗೆ ಪ್ರಧಾನ ಕಛೇರಿಯ ಆದೇಶದಂತೆ ಕಾರ್ಯ ನಿರ್ವಹಿಸುತ್ತಿರುತ್ತಾರೆ.

- **ಉಪ ವ್ಯವಸ್ಥಾಪಕರು (A.B.M), ಪ್ರಧಾನ ಕಛೇರಿ ಪ್ರತಿನಿಧಿ H.R.B /ನಗದು ಗುಮಾಸ್ತ (CASHIER)**

ಎಲ್ಲಾ ಶಾಖೆಗಳಲ್ಲೂ ಉಪ ವ್ಯವಸ್ಥಾಪಕರು, ಪ್ರಧಾನ ಕಛೇರಿ ಪ್ರತಿನಿಧಿ / ನಗದು ಗುಮಾಸ್ತರನ್ನು ನೇಮಿಸಿದ್ದು, ಉಪ ವ್ಯವಸ್ಥಾಪಕರು ವ್ಯವಸ್ಥಾಪಕರುಗಳ ಅನುಪಸ್ಥಿತಿಯಲ್ಲಿ ವ್ಯವಸ್ಥಾಪಕರುಗಳ ಕಾರ್ಯವನ್ನು ನಿರ್ವಹಿಸುತ್ತಾರೆ. ಪ್ರಧಾನ ಕಛೇರಿ ಪ್ರತಿನಿಧಿ, ನಗದು ಗುಮಾಸ್ತರು, ಪ್ರಧಾನ ಕಛೇರಿಯ ಅಧೀನಕ್ಕೊಳಪಟ್ಟು ಕಾರ್ಯನಿರ್ವಹಿಸುವ ಅಧಿಕಾರಿಗಳಾಗಿದ್ದು ಶಾಖೆಗಳಲ್ಲಿ ಯಾರ ಅನುಮತಿ ಇಲ್ಲದೆ ನೇರವಾಗಿ ಅಧ್ಯಕ್ಷರು ಅಥವಾ ಸಿ.ಇ. ಓ ರವರಿಗೆ ಮಾಹಿತಿ ನೀಡಬಹುದು. ಇದರಿಂದಾಗಿ ಮುಂದೆ ಆಗುವ ಯಾವುದೇ ನ್ಯೂನತೆಗಳು ನಡೆಯದಂತೆ ತಡೆಗಟ್ಟ ಬಹುದಾಗಿರುವುದರಿಂದ ಈ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ

- **ಸಾಫ್ಟ್‌ವೇರ್ ಇನ್‌ಚಾರ್ಜ್ (SOFTWARE INCHARGE)**

ಸಾಫ್ಟ್‌ವೇರ್ ಇನ್‌ಚಾರ್ಜ್‌ಗಳು ಆಯಾ ಶಾಖೆಗಳಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿಗಳಾಗಿದ್ದು ಪ್ರಧಾನ ಕಚೇರಿಯ ಆದೇಶದ ಮೇರೆಗೆ ದೈನಂದಿನ ವ್ಯವಹಾರಗಳಲ್ಲಿ ಏನಾದರೂ ನ್ಯೂನತೆಗಳು ಕಂಡು ಬಂದಲ್ಲಿ ಸದರಿಯವರು ಪ್ರಧಾನ ಕಛೇರಿಗೆ ಬರವಣಿಗೆ ಮೂಲಕ ಮಾಹಿತಿ ಕೊಡುವ ಮೂಲಕ ತಪಾಸಣೆಯನ್ನು ನೆಡೆಸುತ್ತಾರೆ. ಮತ್ತು ಶಾಖೆಗಳಲ್ಲಿ ನೀಡುವ ಸಾಲದ ದಾಖಾಲಾತಿಗಳನ್ನು ಪರಿಶೀಲಿಸಲು ಹನ್ನೊಂದು ತಂಡಗಳಾಗಿ ರೂಪಿಸಿರುವ ಅಭಿವೃದ್ಧಿ ಸಮಿತಿಯಲ್ಲಿರುವ ಸದಸ್ಯರಲ್ಲೊಬ್ಬರು ಸಾಲದ ದಾಖಾಲಾತಿಗಳನ್ನು ಸಂಪೂರ್ಣವಾಗಿ ಪರಿಶೀಲಿಸಿದ ನಂತರ ಸಾಲವನ್ನು ವಿತರಿಸುವ ವ್ಯವಸ್ಥೆಯಿದೆ.

- **ಸಾಲ ವಸೂಲಾತಿ ತಂಡಗಳು (LOAN RECOVERY TEAMS) ಮತ್ತು ನ್ಯಾಯಾಲಯ ತಂಡ (LEGAL COURT TEAMS)**

ಸಹಕಾರಿಯು ನೀಡಿರುವ ಯಾವುದೇ ಸಾಲಗಳು ಬಾಕಿ ಉಳಿಯದಂತೆ ಅವುಗಳನ್ನು ವಸೂಲಿ ಮಾಡಲು ವಿಭಾಗವಾರು ರೂಪಿಸಿರುವ ಹನ್ನೊಂದು ಅಭಿವೃದ್ಧಿ ಸಮಿತಿಗಳನ್ನು ಪ್ರತಿನಿಧಿಸುವಂತೆ ಹನ್ನೊಂದು ಸಾಲ ವಸೂಲಾತಿ ತಂಡಗಳನ್ನು ನೇಮಿಸಲಾಗಿದ್ದು ಅವರುಗಳು ಅವಶ್ಯವಿದ್ದಲ್ಲಿ ತಮಗೆ ನೀಡಿರುವ ಶಾಖೆಗಳಿಗೆ ಬೇಟಿ ನೀಡಿ ಸಾಲದ ವಸೂಲಾತಿಗೆ ಬೇಕಿರುವ ಅಗತ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತಾರೆ ಹಾಗೆಯೇ ಸುಸ್ತಿಯಾದ ಸಾಲಗಳನ್ನು SARFAESI ಹಾಗೂ 441 ನ್ಯಾಯಾಲಯದ, US 138 Negotiable instrument act ಆಡಿ ದಾವೆ ಹೂಡಲು ಎರಡು ಪ್ರತ್ಯೇಕ ತಂಡಗಳನ್ನು ರಚಿಸಿದ್ದು ಈ ತಂಡಗಳು ಮುಖ್ಯಕಾರ್ಯನಿರ್ವಹಣಾಧಿಕಾರಿ, ಮತ್ತು ಆಡಳಿತ ಮಂಡಳಿಯು ನಿಯೋಜಿಸಿರುವ ಅಧಿಕೃತ ಅಧಿಕಾರಿಯ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತಾರೆ.

- **ಶಾಖಾ ತನಿಕಾ ಸಮಿತಿ :**

ನಮ್ಮ ಸಹಕಾರಿಯಲ್ಲಿ ಕೇಂದ್ರ ಕಛೇರಿ ಮೊಬೈಲ್ ಸ್ಕ್ವಾಡ್ ಮಾಸಿಕ ಮತ್ತು ತ್ರೈಮಾಸಿಕ ತನಿಕಾ ಸಮಿತಿ ರಚಿಸಿಕೊಂಡು ಅನಿರೀಕ್ಷಿತವಾಗಿ ಶಾಖೆಗಳಿಗೆ ಭೇಟಿ ನೀಡಿ ತನಿಕೆ ನಡೆಸಲು ಕ್ರಮವಿಡಲಾಗಿದೆ.

ನಮ್ಮ ಸಹಕಾರಿಯ ಸರ್ವತೋಮುಖ ಬೆಳವಣಿಗೆಯಲ್ಲಿ ಅನೇಕರು ತಮ್ಮದೇ ಆದ ರೀತಿಯಲ್ಲಿ ಕೊಡುಗೆಗಳನ್ನು ನೀಡುತ್ತಾರೆ. ಅವರೆಲ್ಲರನ್ನು ಸಾಮಾನ್ಯ ಸಭೆಯ ಈ ಸಂದರ್ಭದಲ್ಲಿ ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ.

ಸಹಕಾರಿ ಕ್ಷೇತ್ರದಲ್ಲಿನ ಸಾಕಷ್ಟು ಉತ್ತಮ ಮಾರ್ಪಾಡುಗಳಿಗಾಗಿ, ಕಾಯ್ದೆ, ಉಪವಿಧಿ ತಿದ್ದುಪಡಿ ಸಂದರ್ಭದಲ್ಲಿ ನಮ್ಮ ಜೊತೆ ನಿಂತು ಸಹಕರಿಸಿದ ಪ್ರಸ್ತುತ ಸಚಿವರಿಗೂ ಹಾಗೂ ವಿಶೇಷವಾಗಿ ಕಳೆದ ಸಾಲಿನಲ್ಲಿ ಮಾರ್ಗದರ್ಶಿಸಿದ ಸಹಕಾರ ಸಚಿವರಿಗೂ ತುಂಬು ಹೃದಯದ ಅಭಿನಂದನೆಗಳು.

ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸೂಕ್ತ ಸಲಹೆ, ಸಹಕಾರ. ಮಾರ್ಗದರ್ಶನವನ್ನು ನೀಡುತ್ತಾ ಬಂದಿರುವ ಸಹಕಾರ ಸಂಘಗಳ ನಿಬಂಧಕರಾದ **ಶ್ರೀಯುತ ಡಾ. ಎಂ.ವಿ. ವೆಂಕಟೇಶ್ ಐ.ಎ.ಎಸ್**. ರವರಿಗು ಹಾಗು **ಶ್ರೀಯುತ ಡಾ. ಸುರೇಶ್‌ಗೌಡ** ರವರು ಜಂಟಿನಿಬಂಧಕರು ಕಾನೂನು ಕೋಶ. ನಿಬಂಧಕರ ಕಛೇರಿ ಬೆಂಗಳೂರು ಮತ್ತು ಬೆಂಗಳೂರು ವಿಭಾಗದ ಜಂಟಿನಿಬಂಧಕರಾಗಿರುವ **ಶ್ರೀಯುತ ಹರೀಶ್ ಕುಮಾರ್** ಹಾಗು ನ್ಯಾಯಾಲಯದ ವಸೂಲಾಧಿಕಾರಿಯಾದ **ಶ್ರೀಮತಿ ಸವಿತ** ಮತ್ತು ಸಹಕಾರ ಇಲಾಖೆಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳು.

